ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 6 | ಫೆಬ್ರವರಿ 10, 1980 | 40 ಪೈಸೆ

ರಾಯರ ಸಲಹೆ

"ಮದ್ಯಪಾನ ಮಾಡಿರಿ, ಆದರೆ ಮದ್ಯ ಸೇವಿಸಿರುವಾಗ ಯಾವುದೇ ಆರ್ಡರ್‌ಗಳನ್ನು ಪಾಸುಮಾಡಬೇಡಿರಿ. ಕ್ಲಬ್‌ಗಳಿಗೆ ಹೋಗಿರಿ, ಆದರೆ ಕರ್ತವ್ಯಗಳನ್ನು ಜಾರಿಗೊಳಿಸುವುದರಲ್ಲಿ ಗೆಳೆಯರ ಪ್ರಭಾವ ಬೀಳದಂತೆ ನೋಡಿಕೊಳ್ಳಿರಿ" ಎಂಬ ಸಲಹೆಯನ್ನು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿ ಶ್ರೀ ಗುಂಡೂರಾಯರು ಜಿಲ್ಲಾಧಿಕಾರಿ ಮತ್ತು ವಿಭಾಗಾಧಿಕಾರಿಗಳಿಗೆ ಇವರುಗಳ ಎರಡು ದಿನಗಳ ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತಾ ನೀಡಿದರೆಂದು ವರದಿಯಾಗಿದೆ. ಹಾಗೆನೇ ಶ್ರೀಮಂತರಿಂದ ಹಣತೆಗೆದುಕೊಳ್ಳಬಹುದು, ಆದರೆ ಬಡವರಿಗೆ ಇದರಿಂದ ತೊಂದರೆಯಾಗಬಾರದೆಂದೂ ಹೇಳಿದರೆಂದು ವರದಿಯಾಗಿದೆ. ಇದೇ ಸಂದರ್ಭ ರಾಜ್ಯದಲ್ಲಿ ಹರಿಜನರಿಗೆ ಮತ್ತು ಇತರ ದುರ್ಬಲ ವರ್ಗಗಳವರೀಗೆ ರಕ್ಷಣೆ ಈಯಬೇಕೆಂದೂ, ಇದಕ್ಕಾಗಿ ರಾಜ್ಯದ ಪೋಲೀಸು ಇಲಾಖೆಯನ್ನು ಇನ್ನೂ ಬಲಿಷ್ಟಗೊಳಿಸಬೇಕೆಂಬ ಆಲೋಚನೆ ಇದೆಯೆಂದೂ ಮುಖ್ಯ ಮಂತ್ರಿಯವರು ಹೇಳಿದರಾಗಿ ವರದಿಯಾಗಿದೆ.

ಅಧಿಕಾರಿ ವರ್ಗವು ಇಂದು ಭ್ರಷ್ಟಾಚಾರದಲ್ಲಿ ತುಂಬಿ ತುಳುಕುತ್ತಿರುವಾಗ, ನೈತಿಕ ಮೌಲ್ಯಗಳೇ ಇಲ್ಲವೆಂಬ ಪರಿಸ್ಥಿತಿ ಇರುವಾಗ ರಾಯರು

ಸಂಪಾದಕೀಯ

ಕೊಟ್ಟ ಬಹಿರಂಗ ಸಲಹೆಯು ಮುಂದಿನ ಬೆಳವಣಿಗೆಯ ಮುನ್ಸೂಚಿಯಾಗಿದೆ. ಕುಡಿಯದೆ ಇರುವಾಗ ಅಧಿಕಾರದ ಮತ್ತಿನಲ್ಲಿರುವ ಅಧಿಕಾರಿಗಳು, ಕುಡಿದಾದ ಮೇಲೆ ರಾಯರ ಸಲಹೆಗಳನ್ನು ಮರೆತು ಕಾನೂನುಗಳನ್ನು ಜಾರಿಮಾಡಲು ಹೊರಟರೆ ಜನಸಾಮಾನ್ಯರ ಪಾಡೇನು? ಕುಡಿಯುವುದು ಬೇಡ ಎಂಬ ವಾದವನ್ನು ನಾವು ಪ್ರತಿಪಾದಿಸುತ್ತಿಲ್ಲ. ಆದರೆ ಮುಖ್ಯಮಂತ್ರಿಯವರು ಮದ್ಯಪಾನ ಮತ್ತು ಶ್ರೀಮಂತರಿಂದ ಹಣ ಸ್ವೀಕರಿಸುವುದರ ಬಗ್ಗೆ ಕೊಟ್ಟಿರುವ ಸಲಹೆಗಳು ಅಧಿಕಾರಿವರ್ಗದ ಈಗಾಗಲೇ ನಶಿಸುತ್ತಿರುವ ನೈತಿಕ ಮತ್ತು ಮಾನವೀಯ ಮೌಲ್ಯಗಳನ್ನು ಸಂಪೂರ್ಣ ಇಲ್ಲವಾಗಿ ಮಾಡಬಲ್ಲುವು.

ಹರಿಜನರಿಗೆ, ದುರ್ಬಲ ವಿಭಾಗದ ಜನತೆಗೆ ನ್ಯಾಯ ಮತ್ತು ರಕ್ಷಣೆ ಕೊಡಬೇಕಾದರೆ ಪೋಲೀಸು ಇಲಾಖೆಯನ್ನು ಇನ್ನೂ ಬಲಪಡಿಸುವ ಅವಶ್ಯಕತೆ ಇಲ್ಲ. ಈಗಿರುವ ಪೋಲೀಸು ವ್ಯವಸ್ಥೆ ಮತ್ತು ಕಾನೂನುಗಳನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಜನತೆಯ ಪರವಾಗಿರುವಂತೆ ಮಾಡಬೇಕು. ಶೋಷಕ ಮತ್ತು ಶೋಷಿತ, ಮಾಲಕ ಮತ್ತು ಕಾರ್ಮಿಕ, ದುಡಿಸುವವ ಮತ್ತು ದುಡಿಯುವವ ಮೊದಲಾದವರ ಮಧ್ಯೆ ವಿವಾದವೇರ್ಪಟ್ಟಿರುವಾಗ ಪೋಲೀಸರು ಶೋಷಿತರ ಕಡೆ,

[ಕಡೆಯ ಪುಟ ನೋಡಿ]

ಸ್ಟೀಫನರನ್ನು ಮತ್ತೊಮ್ಮೆ ಸೋಲಿಸಿ

ಕೇರಳದ ಜನತೆಯನ್ನು ಎದುರಿಸಲಾಗದೆ ಏಳನೇ ಲೋಕಸಭಾ ಚುನಾವಣೆಯಲ್ಲಿ ಡೆಲ್ಲಿಯಿಂದ ಸ್ಪರ್ಧಿಸಿ ಡೆಲ್ಲಿಯ ಜನತೆಯಿಂದ ತಿರಸ್ಕರಿಸಲ್ಪಟ್ಟ ಕಾಂಗ್ರೆ ಮುಖಂಡ ಸಿ. ಎಮ್. ಸ್ಟೀಫನರು ಇದೀಗ ಕರ್ನಾಟಕ ರಾಜ್ಯ ಗುಲಬರ್ಗಾ ಲೋಕಸಭಾ ಉಪಚುನಾವಣೆಯಲ್ಲಿ ಕಾಂಗ್ರೆ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಲಿದ್ದಾರೆ. ಮೊನ್ನೆ ತಾನೆ ಲೋಕಸಭಾ ಚುನಾವಣೆ ನಡೆದಿದ್ದು, ಅದರಲ್ಲಿ ಕಾಂಗ್ರೆ ಅಭ್ಯರ್ಥಿಯು ಜಯಗಳಿಸಿದ್ದು, ವಿಜಯಿಯಾಗಿದ್ದ ಧರ್ಮಸಿಂಗ್ ಅವರು ಕೂಡಲೇ ರಾಜಿನಾಮೆ ಇತ್ತಿರುವುದು ಎಂತಾದರೂ ಸ್ಟೀಫನರನ್ನು ಪಾರ್ಲಿಮೆಂಟಿಗೆ ಆಯ್ಕೆ ಮಾಡುವುದಕ್ಕಾಗಿದೆ. ಇಂದಿರಾ ಕಾಂಗ್ರೆಸ್ಸಿನ ಈ ರಾಜಕೀಯವನ್ನು, ಜನತೆಯ ಮೇಲೆ ಅನಾವಶ್ಯಕವಾಗಿ ಮತ್ತೆ ಉಪಚುನಾವಣೆಯನ್ನು ಹೇರಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಜನವರಿ 30ರಿಂದ ಫೆಬ್ರವರಿ ಒಂದರ ತನಕ ದಾಂಡೇಲಿಯಲ್ಲಿ ಸೇರಿದ ಸಭೆಯಲ್ಲಿ ಖಂಡಿಸಿದೆ.

ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿನ ಅಭ್ಯರ್ಥಿ ಸಿ. ಎಂ. ಸ್ಟೀಫನರನ್ನು ಸೋಲಿಸುವುದಕ್ಕಾಗಿ ಎಲ್ಲಾ ವಿರೋಧ ಪಕ್ಷಗಳ ಪರವಾಗಿ ನಿಂತಿರುವ ಕಾಂಗ್ರೆಸ್ (ಯು) ಅಭ್ಯರ್ಥಿಗೆ ಬೆಂಬಲವೀಯಲು ಪಕ್ಷದ ರಾಜ್ಯ ಸಮಿತಿಯು ನಿರ್ಧರಿಸಿತ್ತು. ಆದರೆ ಆ ಮೇಲೆ ಕಾಂಗ್ರೆಸ್ ಅಭ್ಯರ್ಥಿಯು ಸ್ಪರ್ದೆಗೆ ಹಿಂದೇಟು ಹಾಕಿರುವುದರಿಂದ, ವಿರೋಧ ಪಕ್ಷಗಳ ಪರವಾಗಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಶ್ರೀ ಬಾಪು ಗೌಡರು ಒಪ್ಪಿರುವುದರಿಂದ ಇವರನ್ನು ಸಂಪೂರ್ಣ ಬೆಂಬಲಿಸಲು ಪಕ್ಷವು ನಿರ್ಧರಿಸಿದೆ. ಗುಲಬರ್ಗಾದಲ್ಲಿ ಪಕ್ಷದ ಪ್ರಚಾರ ಕೆಲಸವನ್ನು ನಡೆಸುವ ಜವಾಬ್ದಾರಿಯನ್ನು ಕಾಂ. ಎನ್. ಕೆ. ಉಪಾಧ್ಯಾಯ. ಕಾಂ. ಗಂಗಾಧರ ನಮೋಶಿ ಮತ್ತು ಕಾಂ. ಮಹಮ್ಮದ್ ಹಸನ್ ಖಾನ್ ಅವರಿಗೆ ರಾಜ್ಯ ಸಮಿತಿಯು ಒಪ್ಪಿಸಿದೆ. ಚುನಾವಣಾ ಪ್ರಚಾರ ಕೆಲಸಕ್ಕಾಗಿ ಈಗಾಗಲೇ ಗುಲಬರ್ಗಾದಲ್ಲಿ ವಿರೋಧ ಪಕ್ಷಗಳ ಪ್ರತಿನಿಧಿಗಳೆಲ್ಲಾ ಸೇರಿ ಎಲ್ಲಾ ಪಕ್ಷಗಳ ಪ್ರತಿನಿಧಿಗಳಿರುವ ಒಂದು ಸಮಿತಿಯನ್ನು ರಚಿಸಿದೆ. ಚುನಾವಣಾ ಪ್ರಚಾರ ಕೆಲಸಕ್ಕೆ ಎಲ್ಲಾ ಪಕ್ಷಗಳ ರಾಷ್ಟ್ರೀಯ ಮುಂದಾಳುಗಳು ಬರುವ ನಿರೀಕ್ಷ ಇದೆ.

ಕರ್ನಾಟಕದ ಒಂದು ಮೂಲೆಯಲ್ಲಿ ನಡೆಯಲಿರುವ ಈ ಚುನಾವಣೆಯು ಬಹಳ ಪ್ರಾಮುಖ್ಯವಾಗಿದೆ. ಮೊನ್ನೆ ತಾನೇ ನಡೆದ ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ವಿರೋಧ ಪಕ್ಷಗಳ ಒಟ್ಟು ಮತ ಕಾಂಗ್ರೆ ಅಭ್ಯರ್ಥಿಗಿಂತ 30000 ಸಹಸ್ರ ಕಡಿಮೆ ಇತ್ತು. ಎಲ್ಲಾ ವಿರೋಧ ಪಕ್ಷಗಳು ಒಮ್ಮತದಿಂದಲೂ, ಸ್ಫೂರ್ತಿಯಿಂದಲೂ ಸರಿಯಾಗಿ ಶ್ರಮಿಸಿದರೆ ಸ್ಟೀಫನರನ್ನು ಸೋಲಿಸುವ ಸಾಧ್ಯತೆ ಇದೆ. ಇದನ್ನರಿತು ಎಲ್ಲಾ ವಿರೋಧ ಪಕ್ಷಗಳೂ ಸರಿಯಾಗಿ ಶ್ರಮಿಸಿ, ಗುಲಬರ್ಗಾದ ಜನತೆಯನ್ನು ಎಚ್ಚರಿಸಿ ಸ್ಟೀಫನರನ್ನು ಸೋಲಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರೆಯೀಯುತ್ತದೆ. ●

ಚುನಾವಣಾ ಫಲಿತಾಂಶದ ವಿಮರ್ಶೆ

ಸಂಘಟನೆಯನ್ನು ಬಲಪಡಿಸಲು ಕರೆ

ಇತ್ತೀಚಿಗೆ ನಡೆದ ಲೋಕಸಭಾ ಚುನಾವಣಾ ಫಲಿತಾಂಶ ಮತ್ತು ಕೆಲವೇ ದಿನಗಳ ಹಿಂದೆ ನಡೆದ ಕೇರಳದ ವಿಧಾನಸಭಾ ಚುನಾವಣಾ ಫಲಿತಾಂಶಗಳು "ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿಗೆ ಪರಿಣಾಮಕಾರಿಯಾಗಿ ಸವಾಲನ್ನೊಡ್ಡುವುದು ಎಡ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಕ್ಕೂಟದಿಂದ ಮಾತ್ರ" ಎಂಬುದನ್ನು ತೋರಿಸಿಕೊಟ್ಟಿವೆ. ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳ ರಂಗಕ್ಕೆ ಹೆಚ್ಚಿನ ಸ್ಥಾನಗಳಲ್ಲಿ ಜಯಗಳಿಸಿಕೊಟ್ಟ ಪಶ್ಚಿಮ ಬಂಗಾಲ ಮತ್ತು ತ್ರಿಪುರಾದ ಜನತೆಗೂ, ಎಡ ಪ್ರಜಾಪ್ರಭುತ್ವರಂಗದ ಹೆಚ್ಚಿನ ಅಭ್ಯರ್ಥಿಗಳನ್ನು ಗೆಲ್ಲಿಸಿದ ಕೇರಳ ರಾಜ್ಯದ ಜನತೆಗೂ ಜನವರಿ 30 ರಿಂದ ಫೆಬ್ರವರಿ ಒಂದರ ತನಕ ದಾಂಡೇಲಿಯಲ್ಲಿ ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸಭೆಯು ಅಭಿನಂದನೆಗಳನ್ನು ಸಲ್ಲಿಸಿದೆ. ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಭಾರಿ ಬಹುಮತ ಪಡೆದು ಕೇಂದ್ರದಲ್ಲಿ ಸರಕಾರ ಸ್ಥಾಪಿಸಿದ ಕೆಲವೇ ದಿನಗಳಲ್ಲಿ ಕೇರಳ ವಿಧಾನಸಭಾ ಚುನಾವಣೆ ನಡೆದಿರುವುದಾದರೂ, ವಿಧಾನಸಭೆಗೆ ಭಾರಿ ಬಹುಮತದಿಂದ ಎಡ ಮತ್ತು ಪ್ರಜಾಪ್ರಭುತ್ವ ಕೂಟದ ಅಭ್ಯರ್ಥಿಗಳನ್ನು ಆರಿಸಿದುದಕ್ಕೆ ರಾಜ್ಯಸಮಿತಿಯು ಕೇರಳದ ಜನತೆಗೆ ಕೆಂಪು ವಂದನೆಗಳನ್ನು ಸಲ್ಲಿಸಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಂದಾಳು ಕಾಂ. ಇ. ಕೆ. ನಾಯನಾರ್ ಅವರ ಮುಖಂಡತ್ವದ ಕೇರಳದ ಎಡ ಪ್ರಜಾಪ್ರಭುತ್ವರಂಗದ ಸರಕಾರವು ಯಶಸ್ವಿ ಆಡಳಿತವನ್ನು ನಡೆಸುವುದರಲ್ಲಿ ಜಯಪ್ರದವಾಗಿ, ರಾಷ್ಟ್ರದಾದ್ಯಂತ, ಅದರಲ್ಲೂ ಮುಖ್ಯವಾಗಿ ನೆರೆರಾಜ್ಯವಾದ ಕರ್ನಾಟಕದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳ ಮುನ್ನಡೆಗೆ ಸ್ಫೂರ್ತಿದಾಯಕವಾಗಲಿ ಎಂದು ಪಕ್ಷದ ರಾಜ್ಯಸಮಿತಿಯು ಹಾರೈಸಿದೆ.

ಹಿಂದೆ ಶ್ರೀ ದೇವರಾಜ ಅರಸು ಅವರು ಇಂದಿರಾಗಾಂಧಿ ಹೆಸರಿನಲ್ಲೆ ವ್ಯಕ್ತಿ ಆಧಾರಿತವಾಗಿ ಎಲ್ಲವನ್ನೂ ಮಾಡಿದ್ದು, ಇಂದಿರಾಗಾಂಧಿ ಸರ್ವಾಧಿಕಾರವನ್ನು ವಿರೋಧಿಸಿ ಆಕೆಯಿಂದ ದೂರ ಸರಿದರು. ಆದರೆ ಹಿಂದಿನಿಂದಲೂ ಮತ್ತು ಇಂದಿರಾಗಾಂಧಿಯಿಂದ ದೂರವಾದ ಮೇಲೂ ಕಾರ್ಯಕ್ರಮ ಮತ್ತು ವಿಚಾರಗಳನ್ನು ಜನತೆಯ ಮಧ್ಯೆ ತೆಗೆದುಕೊಂಡು ಹೋಗದೆ, ಭ್ರಷ್ಟ ಅಧಿಕಾರಿಗಳು ಮತ್ತು ಸಂದರ್ಭಸಾಧಕ ಶಾಸಕರು ಮತ್ತು ಮಂತ್ರಿಗಳನ್ನು ನಂಬಿಕೊಂಡು ಬಂದದ್ದರ ಪರಿಣಾಮವಾಗಿ ಚುನಾವಣೆಯಲ್ಲಿ ಸೋಲನ್ನನುಭವಿಸಬೇಕಾಯಿತು. ಜನತಾಪಕ್ಷದ ಮತ್ತು ಆಮೇಲೆ ಲೋಕದಳ ಹಾಗೂ ಅರಸು ಕಾಂಗ್ರೆಸ್ ಕೂಟದ ಆಡಳಿತದ ಕಾಲದಲ್ಲಿ ಆಡಳಿತ (ಸರಕಾರ)ವೇ ಇಲ್ಲವೆಂಬ ಪರಿಸ್ಥಿತಿ ಉಂಟಾಗಿದ್ದು, ಕೇರಳ, ಪಶ್ಚಿಮ ಬಂಗಾಲ ಮತ್ತು ತ್ರಿಪುರಾ ರಾಜ್ಯಗಳ ಹೊರತು ಬೇರೆಡೆ ಪರಿಣಾಮಕಾರಿ ಬದಲಿ ಇಲ್ಲವೆಂಬಲ್ಲಿ ಜನತೆಯು ಮತ್ತೆ ಇಂದಿರಾ ಕಾಂಗ್ರೆಸ್ಸಿಗೆ ಬೆಂಬಲಿಸಿತು. ಕರ್ನಾಟಕ ರಾಜ್ಯದ ಫಲಿತಾಂಶವು ಇದೇ ಆಗಿದೆ. 1977 ರಲ್ಲಿ ಇಂದಿರಾ ಕಾಂಗ್ರೆಸ್ ಸರ್ವಾಧಿಕಾರದ ವಿರೋಧ ಶಕ್ತಿಗಳು ಒಗ್ಗಟ್ಟಿದ್ದಂತೆ ಈ ಬಾರಿ ಇಲ್ಲದಿರುವುದರಿಂದ ಇಂದಿರಾ ಕಾಂಗ್ರೆಸ್ಸಿಗೆ ಹೆಚ್ಚಿಗೆ ಸ್ಥಾನಗಳನ್ನು ಪಡೆಯುವುದೂ ಸಾಧ್ಯವಾಯಿತು. ಸಿ.ಪಿ.ಐ. ಮತ್ತು ಅರಸು ಕಾಂಗ್ರೆಸ್ ಚುನಾವಣಾ ಸಂದರ್ಭದಲ್ಲಿ ಅನುಸರಿಸಿದ ಐಕ್ಯ ವಿರೋಧಿ ನಿಲುಮೆಯಿಂದಾಗಿ ಮತ್ತು ಅರಸು ಕಾಂಗ್ರೆಸ್ ದೃಢ ನಿಲುಮೆಯನ್ನು ತಳೆಯದಿದ್ದುದರಿಂದ ರಾಜ್ಯದಲ್ಲಿ ಇಂದಿರಾ ಕಾಂಗ್ರೆಸ್ ವಿರುದ್ಧದ ಹೋರಾಟವು ಸಾಕಷ್ಟು ಸ್ಫೂರ್ತಿದಾಯಕವಾಗದಾಯಿತು. ಬಂಗಾಲ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿನ ಬೆಳವಣಿಗೆಯಿಂದಲಾದರೂ ಸ್ಫೂರ್ತಿ ಮತ್ತು ಪಾಠಗಳನ್ನು ಕಲಿತು, ರಾಜ್ಯದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ನಿಂತು ಜನತೆಯ ಸಮಸ್ಯೆಗಳ ಬಗ್ಗೆ ಹೋರಾಡುವುದರ ಮೂಲಕ ಬದಲಿಯನ್ನು ಬೆಳೆಸಲು ಪಕ್ಷದ ರಾಜ್ಯ ಸಮಿತಿಯು ಕರೆ ಇತ್ತಿತು.

(ಕಡೆಯ ಪುಟ ನೋಡಿ)

ಕಾರ್ಮಿಕ ಮುಖಂಡರ ಮೇಲೆ ದಬ್ಬಾಳಿಕೆ

ಧಾರವಾಡದ ಟ್ಯವಾಕ ಕಂಪನಿಯಲ್ಲಿ ಆಡಳಿತ ವರ್ಗದವರು ಕಾರ್ಮಿಕರ ಮೇಲೆ ಇಲ್ಲಸಲ್ಲದ ಆರೋಪವನ್ನು ಹೊರಿಸಿ ಛಾರ್ಜ್‌ಷೀಟ್ ಹಾಕುವುದು, ಸಸ್ಪೆಂಡ್ ಮಾಡುವುದು ಮುಂತಾದ ರೀತಿ ಕಿರುಕುಳ ಕೊಡಲು ಪ್ರಾರಂಭಿಸಿದ್ದಾರೆ. ಕರ್ಮಚಾರಿ ಸಂಘದ ಪ್ರಧಾನ ಕಾರ್ಯದರ್ಶಿಯಾದ ಡಿ. ಹೆಚ್. ಬಾದಾಮಿ ಹಾಗೂ ಮಕಾನೆ ಎಂಬ ಕಾರ್ಮಿಕರನ್ನು ಸಸ್ಪೆಂಡ್ ಮಾಡಿದ್ದಾರೆ.

ತಾ. 21-1-80ರಂದು ಕಾರ್ಮಿಕರ ಒಂದು ಬಹಿರಂಗ ಸಭೆ ನಡೆದು, ಸಭೆಯನ್ನು ಉದ್ದೇಶಿಸಿ ಕಾಂ. ಎಸ್. ಜಿ. ಪಾಟೀಲ್ ಮಾತನಾಡುತ್ತಾ, ಇನ್ನು ಮುಂದಾದರೂ ಆಡಳಿತ ವರ್ಗದವರು ತಮ್ಮ ಕಾರ್ಮಿಕ ವಿರೋಧಿ ನೀತಿಯನ್ನು ಕೈಬಿಡದಿದ್ದರೆ, ಇದುವರೆಗೂ ಶಾಂತವಾಗಿರುವ ಕಾರ್ಮಿಕರು ಮುಂದೆ ತೀವ್ರ ಕ್ರಮ ಕೈಕೊಂಡರೆ ಅದಕ್ಕೆ ಆಡಳಿತ ವರ್ಗದವರೇ ಜವಾಬ್ದಾರರಾಗುತ್ತಾರೆಂದೂ ಎಚ್ಚರಿಕೆ ನೀಡಿದ್ದಾರೆ. ಕಾರ್ಖಾನೆಯಲ್ಲಿನ ಪರಿಸ್ಥಿತಿಯ ಬಗ್ಗೆ ಹಾಗೂ ಕಾರ್ಮಿಕರಿಗೆ ಕೂಡಲೇ ಕನಿಷ್ಠ ವೇತನ ಕಾಯಿದೆ ಜಾರಿಯಾಗುವುದರ ಬಗ್ಗೆ ಒಂದು ಮನವಿ ಪತ್ರವನ್ನು ರಾಜ್ಯದ ಮುಖ್ಯಮಂತ್ರಿಗಳಿಗೆ ತಾ. 25-1-80 ರಂದು ಸಲ್ಲಿಸಿದ್ದಾರೆ.

○

ಬಂಗೂರ್ ಸೋಮಾನಿಯವರಿಗೆ ಸೋಲು ಖಚಿತ !

ಉ. ಕ. ಜಿಲ್ಲೆ, ದಾಂಡೇಲಿಯಲ್ಲಿ ತಾ. 2-2-80 ರಂದು ಸಂಜೆ ನಡೆದ ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿ. ಪಿ. ಐ. (ಎಂ) ಮುಖಂಡರು ಮೇಲಿನಂತೆ ನುಡಿದರು.

ದೇಶದ ಹಿರಿಯ ಬಂಡವಾಳಶಾಹಿಗಳಲ್ಲಿ ಒಬ್ಬರಾದ ಶ್ರೀ ಸೋಮಾನಿಯವರ ಮಾಲಿಕತ್ವದಲ್ಲಿರುವ ದಾಂಡೇಲಿ ಕಾಗದ ಕಾರ್ಖಾನೆಯ ಕಾರ್ಮಿಕರು ಕಳೆದ ಎರಡು ತಿಂಗಳಿಂದ ಮುಷ್ಕರದಲ್ಲಿದ್ದಾರೆ. ಮುಷ್ಕರ ಇದೀಗ ಮೂರನೇ ತಿಂಗಳಿಗೆ ಕಾಲಿಟ್ಟಿದೆ. ಕಾರ್ಮಿಕರು ಬೀದಿಪಾಲಾಗಿದ್ದು, ಕಾರ್ಮಿಕ ನಗರವಾದ ಇಡೀ ದಾಂಡೇಲಿಯ ವ್ಯಾಪಾರ, ವ್ಯವಹಾರಗಳು ಅಸ್ತವ್ಯಸ್ತವಾಗಿವೆ, ಕಾರ್ಮಿಕರ ಬೇಡಿಕೆಗಳ ಬಗ್ಗೆ ಆಡಳಿತವರ್ಗ ಹಾಗೂ ಸರಕಾರ ನಿರ್ಲಕ್ಷ್ಯದಿಂದಿರುವುದು ವಿಷಾದನೀಯವೆಂದು ಸಿ. ಪಿ. ಐ. (ಎಂ)ನ ರಾಜ್ಯಶಾಖೆ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ನುಡಿದರು. ದಾಂಡೇಲಿ ಕಾರ್ಮಿಕರ ಹೋರಾಟ ಹಾಗೂ ರಾಜ್ಯದ ದುಡಿಯುವ ಜನತೆಯ ಹೋರಾಟಕ್ಕೆ ಸಿ. ಪಿ. ಐ. (ಎಂ) ಸಂಪೂರ್ಣವಾಗಿ ಬೆಂಬಲಿಸುವುದೆಂದು ಅವರು ತಮ್ಮ ಭಾಷಣದಲ್ಲಿ ತಿಳಿಸಿದರು.

ರಾಜ್ಯ ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ. ನಂಜುಂಡಪ್ಪನವರು, ಇನ್ನು ಹದಿನೈದು ದಿನಗಳ ಒಳಗಾಗಿ ದಾಂಡೇಲಿ ಪೇಪರ್ ಮಿಲ್ ಕಾರ್ಮಿಕರ ಸಮಸ್ಯೆ ಬಗೆಹರಿಯದಿದ್ದರೆ ರಾಜ್ಯದಲ್ಲಿ ಸಿ. ಐ. ಟಿ. ಯು.ನ ಎಲ್ಲಾ ಸಂಘಟನೆಗಳು ಈ ಶೋಷಣೆಯ ವಿರುದ್ಧ ಪ್ರತಿಭಟನಾ ಚಳುವಳಿಗಳನ್ನು ಪ್ರಾರಂಭಿಸುವುದಾಗಿ ಪ್ರಕಟಿಸಿದರು.

ಕರ್ನಾಟಕದಲ್ಲಿರುವ ಮಲೆಯಾಳಿಗಳು ಕರ್ನಾಟಕದ ಪರಂಪರೆ, ಜನತೆ, ಮತ್ತವರ ಸಮಾಜದಲ್ಲಿ ಬೆರೆಯಬೇಕೆಂದು ಹೇಳಿದ ಸಿ. ಪಿ. ಐ. (ಎಂ) ಮುಖಂಡ ಕಾಂ. ವಿ. ಜೆ. ಕೆ. ನಾಯರ್‌ರವರು, ಎಷ್ಟೇ ಕಷ್ಟ ಬರಲಿ ಹೋರಾಟ ಯಶಸ್ವಿಯಾಗುವುದೆಂಬ ಭರವಸೆ ತಮಗಿದೆ ಎಂದರು.

ಬೆಳಗಾವಿನ ಅಲ್ಯುಮಿನಿಯಂ ಕಾರ್ಖಾನೆ ನೌಕರರ ಸಂಘದ ಕಾರ್ಯದರ್ಶಿ ಕಾಂ ಎಸ್. ಎಮ್. ಯಾಹ್ಯಾರವರು ಮಾತನಾಡಿ ಮುಷ್ಕರದಲ್ಲಿರುವ ಕಾರ್ಮಿಕರ ಸಮಸ್ಯೆ ಬಗೆಹರಿಯುವವರೆಗೆ ತಾವು ಅರ್ಧ ರೊಟ್ಟಿಯನ್ನು ತಿಂದು ಉಳಿದರ್ಧವನ್ನು ತಮ್ಮ ದಾಂಡೇಲಿಯ ಸೋದರ ಕಾರ್ಮಿಕರಿಗೆ ಕೊಡುವುದಾಗಿ ಹೇಳಿದರು. ಹೋರಾಟಕ್ಕೆ ಶುಭಾಶಯ ಕೋರಿದರು.

ಕರ್ನಾಟಕ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್‌ರವರು ಬಂಡವಾಳಶಾಹಿ ಸಮಾಜದ ಆರ್ಥಿಕ ಬಿಕ್ಕಟ್ಟು, ಬಿಕ್ಕಟ್ಟಿನ ಫಲವಾಗಿ ಉಂಟಾಗುವ ಬೆಲೆಯೇರಿಕೆ, ನಿರುದ್ಯೋಗ ಮುಂತಾದವನ್ನು ವಿವರಿಸಿದರು. ದೇಶದಲ್ಲಿ ಸರ್ವಾಧಿಕಾರಿ ಶಕ್ತಿಗಳು ಮತ್ತೆ ಅಧಿಕಾರಕ್ಕೆ ಬಂದಿರುವುದರಿಂದ ಕಾರ್ಮಿಕ ವರ್ಗ ಬರಲಿರುವ ದಿನಗಳಲ್ಲಿ ದೊಡ್ಡ ರೀತಿಯಲ್ಲಿ ದಾಳಿ, ದಬ್ಬಾಳಿಕೆಯನ್ನು ಎದುರಿಸಬೇಕಾಗುತ್ತದೆ ಎಂದರು. ಇಂತಹ ಹೋರಾಟಗಳ ಒಂದು ಭಾಗವಾದ ಸದ್ಯದ ಮುಷ್ಕರವನ್ನು ಜಯಗೊಳಿಸಬೇಕೆಂದು ಕೇಳಿಕೊಂಡರು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ ಸಿ. ಪಿ. ಐ (ಎಂ) ಮುಖಂಡ, ದಾಂಡೇಲಿ ಪುರಸಭಾಧ್ಯಕ್ಷ ಹಾಗೂ ಪೇಪರ್ ಮಿಲ್ ಕಾರ್ಮಿಕರ ಸಂಘದ ಅಧ್ಯಕ್ಷರಾದ ಕಾಂ. ಸ್ಥಳೇಕರ್ ತಮ್ಮ ಸುದೀರ್ಘ ಭಾಷಣದಲ್ಲಿ ಕಾರ್ಮಿಕ ಪ್ರತಿನಿಧಿಗಳ ಹಾಗೂ ಆಡಳಿತವರ್ಗದವರ ಮಧ್ಯೆ ನಡೆದ ಹಲವಾರು ಸುತ್ತಿನ ಮಾತುಕತೆಗಳ ವಿವರಗಳನ್ನು ನೆರೆದಿದ್ದವರಿಗೆ ವಿವರಿಸಿದರು. ಮಾತುಕತೆಗಳು ಆಡಳಿತವರ್ಗದ ಹಟಮಾರಿತನದಿಂದ ವಿಫಲವಾಗಿರುವುದರಿಂದ ತಾ. 3-2-80ರಿಂದ ಹಳಿಯಾಳ ತಾಲ್ಲೂಕು ಕಛೇರಿಯ ಮುಂದೆ ಹಾಗೂ ತಾ. 11-2-80 ರಿಂದ ಕಾರವಾರ ಜಿಲ್ಲಾಧಿಕಾರಿಗಳ ಮುಂದೆ ಸತ್ಯಾಗ್ರಹ ಪ್ರಾರಂಭಿಸಲಾಗುವುದು.

ದಾಂಡೇಲಿ ಪುರಸಭೆ ಸಿ. ಪಿ. ಐ. (ಎಂ)ನವರ ಕೈಯಲ್ಲಿರುವುದರಿಂದ ನ್ಯಾಯರೀತಿಯಲ್ಲಿ ಸಿಗಬೇಕಾದ ಧನಸಹಾಯ ಸಿಗುತ್ತಿಲ್ಲ. ಕೆಲಸಗಳನ್ನು ಪೂರೈಸಲು ಅಸಿಸ್ಟೆಂಟ್ ಎಂಜಿನಿಯರ್ ಇಲ್ಲದೆ ಕೆಲಸಗಳೆಲ್ಲಾ ನಿಂತಿವೆ, ಇದು ರಾಜ್ಯ ಸರಕಾರದ ಮಲತಾಯಿ ಧೋರಣೆಯನ್ನು ತೋರಿಸುತ್ತದೆ ಎಂದರು.

ಮುಷ್ಕರವನ್ನು ಏನೇ ಬರಲಿ, ಐಕ್ಯತೆಯಿಂದ ಮುಂದುವರೆಸಿಕೊಂಡು ಬರಬೇಕೆಂದು ಸ್ಥಳೇಕರ್ ನೀಡಿದ ಕರೆಗೆ ಕಾರ್ಮಿಕರು ಜಯಘೋಷಗಳಿಂದ ಓಗೊಟ್ಟರು. ಕಾಂ. ಜಿ. ವಿ. ಪವಾರ್ ಎಲ್ಲರಿಗೂ ವಂದಿಸಿದರು.

●

ಬೆಲೆ ಏರಿಕೆ ವಿರುದ್ಧ ಹೋರಾಡಲು ರಾಜ್ಯಸಮಿತಿ ಕರೆ

ಸ್ವಾತಂತ್ರ್ಯಾನಂತರ ನಮ್ಮ ದೇಶವನ್ನು ಆಳಿದ ಭೂಮಾಲಕ ಬಂಡವಾಳಶಾಹಿ ಪಕ್ಷಗಳು ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುತ್ತಾ ಬಂದುದರ ಪರಿಣಾಮವಾಗಿ ಹಣದುಬ್ಬರ, ಬೆಲೆಏರಿಕೆ, ಜೀವನಾವಶ್ಯಕ ವಸ್ತುಗಳ ಅಭಾವ- ಇವೆಲ್ಲಾ ದಿನೇ ದಿನೇ ಬೃಹದಾಕಾರವಾಗಿ ಬೆಳೆದು ಬಂದಿವೆ. ಜೀವನಾವಶ್ಯಕ ವಸ್ತುಗಳ ಅಭಾವ ಮತ್ತು ದುಬಾರಿ ಬೆಲೆಯಿಂದಲಾಗಿ ಜನಸಾಮಾನ್ಯರು ಜೀವನ ಮಾಡುವುದೇ ದುಸ್ತರವಾಗಿದೆ.

ಇತ್ತೀಚಿನ ದಿನಗಳಲ್ಲಿ ಸೀಮೆಎಣ್ಣೆ ಮತ್ತು ಸಕ್ಕರೆಯಂತಹ ಜೀವನಾವಶ್ಯಕ ವಸ್ತುಗಳ ಕೃತಕ ಅಭಾವ ಮತ್ತು ದುಬಾರಿ ಬೆಲೆಯಿಂದಲಾಗಿ ಶ್ರಮಜೀವಿಗಳು ಮತ್ತು ಜನಸಾಮಾನ್ಯರು ಬಹಳಷ್ಟು ಕಷ್ಟಪಡುವಂತಾಗಿದೆ. ಸಕ್ಕರೆ ಅಥವಾ ಸೀಮೆಎಣ್ಣೆ ಸರಬರಾಜು ಸಾಕಷ್ಟಿಲ್ಲವೆಂದು ಹೇಳಲಾಗುತ್ತಿದ್ದರೂ, ಕಾಳಸಂತೆಯಲ್ಲಿ ಇವು ಬೇಕಾದಷ್ಟು ಸಿಗುತ್ತಲಿವೆ. ದೇಶದ ಜನತೆಗೆ ಸಕ್ಕರೆ ಸಿಗುತ್ತಿಲ್ಲವಾದರೂ, ಹೊರದೇಶಕ್ಕೆ ಸಕ್ಕರೆಯನ್ನು ಕಡಿಮೆ ಬೆಲೆಯಲ್ಲಿ ರಫ್ತು ಮಾಡಲಾಗುತ್ತಲಿದೆ. ಲೋಕಸಭಾ ಚುನಾವಣೆಯಾದೊಡನೆಯೇ ಒಮ್ಮಿಂದೊಮ್ಮೆಲೆ ಸಕ್ಕರೆಯ ಬೆಲೆ ಇನ್ನೂ ಹೆಚ್ಚಿರುವುದನ್ನು ನೋಡಿದರೆ, ಅಧಿಕಾರಕ್ಕೆ ಬಂದಿರುವ ಪಕ್ಷವು ಸಕ್ಕರೆ ಮಾಲಕರಿಗೆ ಬೆಂಬಲವಾಗಿ ನಿಂತಿರುವುದು ಸ್ಪಷ್ಟವಾಗಿದೆ.

ಈ ಪರಿಸ್ಥಿತಿಯಲ್ಲಿ ಕಾಳಸಂತೆಕೋರರನ್ನು ಬಯಲಿಗೆಳೆಯಲೂ, ಜೀವನಾವಶ್ಯಕ ವಸ್ತುಗಳು ನ್ಯಾಯ ಬೆಲೆಯಲ್ಲಿ ಜನತೆಗೆ ದೊರೆಯುವಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವ್ಯವಸ್ಥೆ ಮಾಡುವುದಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರಕಾರಗಳನ್ನು ಒತ್ತಾಯಿಸಲೂ ಪಕ್ಷದ ಎಲ್ಲಾ ಘಟಕಗಳು ಮತ್ತು ಸಾಮೂಹಿಕ ಸಂಘಟನೆಗಳು ಸತತವಾಗಿ ಹೋರಾಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಕರೆಯೀಯುತ್ತದೆ. ಜನರ ಸಮಸ್ಯೆಗಳ ಪರಿಹಾರಕ್ಕಾಗಿ ನಡೆಯುವ ಈ ಹೋರಾಟಗಳಲ್ಲಿ ಇತರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ ಸೇರುವಂತೆ ಮಾಡಿ ಜನತೆಯ ಚಳವಳವನ್ನು ಎಲ್ಲಾ ಕಡೆಗಳಲ್ಲಿ ಬೆಳೆಸಲು ರಾಜ್ಯ ಸಮಿತಿಯು ಕರೆಯೀಯುತ್ತದೆ. ಜನವರಿ ಕೊನೆಯಲ್ಲಿ ದಾಂಡೇಲಿಯಲ್ಲಿ ಸಭೆ ಸೇರಿದ ಪಕ್ಷದ ರಾಜ್ಯ ಸಮಿತಿಯು ಜೀವನಾವಶ್ಯಕ ಸಾಮಗ್ರಿಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ನ್ಯಾಯ ಬೆಲೆಯಲ್ಲಿ ಒದಗಿಸುವಂತೆ ರಾಜ್ಯ ಮತ್ತು ಕೇಂದ್ರ ಸರಕಾರಗಳನ್ನು ಒತ್ತಾಯಿಸಿದೆ. ಪಕ್ಷದ ಎಲ್ಲಾ ಸ್ಥಳೀಯ ಸಮಿತಿಗಳು ಈ ಸಮಸ್ಯೆಯತ್ತ ಗಮನ ಹರಿಸಿ, ಜನತೆಗೆ ನೇತೃತ್ವವನ್ನಿತ್ತು, ಹೋರಾಟವನ್ನು ಬೆಳೆಸಲು ರಾಜ್ಯ ಸಮಿತಿಯು ಕರೆ ನೀಡುತ್ತದೆ.

●

ಐಕ್ಯರಂಗ ಓದುಗರು, ಚಂದಾದಾರರು ಮತ್ತು ಏಜೆನ್ಸಿಗಳ ಗಮನಕ್ಕೆ

ಐಕ್ಯರಂಗದ ಮೇ ವಿಶೇಷಾಂಕವು 1980 ಮೇ ತಿಂಗಳ ಮೊದಲವಾರ ಹೊರಬರಲಿದೆ. ಮೇ ನಾಲ್ಕರಂದು ವಿಶೇಷಾಂಕವು ಪ್ರಕಟವಾಗಲಿರುವುದರಿಂದ ಏಪ್ರಿಲ್ 27ರ ಸಂಚಿಕೆಯು ಪ್ರಕಟವಾಗುವುದಿಲ್ಲ. ಏಪ್ರಿಲ್‌27ರ ಸಂಚಿಕೆ ಮತ್ತು ಮೇ 4ರ ಸಂಚಿಕೆಗಳೂ ಸೇರಿ ಮೇ ನಾಲ್ಕರಂದು ವಿಶೇಷಾಂಕವು ಪ್ರಕಟವಾಗಲಿರುವುದು. ವಿಶೇಷಾಂಕಕ್ಕೆ ಲೇಖನಗಳನ್ನು ಕಳುಹಿಸುವವರು ಮಾರ್ಚ್ ತಿಂಗಳ 31ನೇ ತಾರೀಖಿನೊಳಗೆ ಐಕ್ಯರಂಗ ಸಂಪಾದಕರಿಗೆ ಕಳುಹಿಸಿಕೊಡಬೇಕು. ಲೇಖನವನ್ನು ಪ್ರಕಟಿಸುವ ಹಕ್ಕು ಸಂಪಾದಕ ಮಂಡಳಿಗೆ ಸೇರಿದೆ.

ಮೇ ತಿಂಗಳ ಮೊದಲವಾರದಿಂದ ಐಕ್ಯರಂಗದ ಬಿಡಿಪ್ರತಿಯ ಬೆಲೆಯನ್ನು ಈಗಿರುವ 40 ಪೈಸೆಯಿಂದ 50 ಪೈಸೆಗೆ ಏರಿಸಲಾಗುವುದು. ಬೆಲೆಏರಿಕೆ ಮತ್ತು ಇತರ ಅಗತ್ಯ ವೆಚ್ಚವು ಹೆಚ್ಚಾಗಿರುವುದರಿಂದ ಈಗಿನ 40 ಪೈಸೆಯಂತೆ ಐಕ್ಯರಂಗವನ್ನು ಹೊರತರುವುದು ಕಷ್ಟವಾಗಿದೆ. ಆದುದರಿಂದ ಅನಿವಾರ್ಯವಾಗಿ ಬಿಡಿಪ್ರತಿಯ ಬೆಲೆಯನ್ನು 50 ಪೈಸೆಗೆ ಏರಿಸಬೇಕಾಗಿ ಬಂದಿದೆ. ನಮ್ಮ ಓದುಗರು ಮತ್ತು ಏಜೆನ್ಸಿಗಳು ನಮ್ಮೊಡನೆ ಸಹಕರಿಸಬೇಕಾಗಿ ವಿನಂತಿ.

ಮೇ ತಿಂಗಳ ಮೊದಲವಾರದಿಂದ ಐಕ್ಯರಂಗ ಬಿಡಿಪ್ರತಿಯ ಬೆಲೆಯು 50 ಪೈಸೆಗೆ ಏರುವುದರಿಂದ, ಮೇ ಮೊದಲ ವಾರದಿಂದ ವಾರ್ಷಿಕ ಚಂದಾವು ಇಪ್ಪತ್ತೈದು ರೂಪಾಯಿಗಳಾಗುವುದು. ಮೇ ಮೊದಲ ವಾರಕ್ಕೆ ಮೊದಲೇ ಚಂದಾದಾರರಾಗುವವರಿಗೆ ಈಗಿನಂತೆ ಇಪ್ಪತ್ತು ರೂಪಾಯಿಗಳಿಗೆ ವಾರ್ಷಿಕ ಚಂದಾದಾರರಾಗಬಹುದು. ಚಂದಾದಾರರಾಗಬಯಸುವವರಿಗೆ ಈ ವಿಶೇಷ ರಿಯಾಯ್ತಿ ಕೊಡಲಾಗುವುದು.

ಸರಿಯಾಗಿ ಹಣ ಕಳುಹಿಸದೆ ಬಾಕಿ ಉಳಿದಿರುವ ಕಾರಣಕ್ಕಾಗಿ ಕೆಲವು ಏಜೆನ್ಸಿಗಳನ್ನು ರದ್ದುಮಾಡಬೇಕಾಗಿ ಬಂದಿದೆ. ಬಿಲ್ಲು ದೊರೆತು ಹದಿನೈದು ದಿನಗಳೊಳಗೆ ಹಣಕಳುಹಿಸದಿದ್ದಲ್ಲಿ ವ್ಯವಹಾರ ನಡೆಸುವುದು ಕಷ್ಟವಾಗುತ್ತಲಿದೆ. ಬಿಲ್ಲು ಬಾಕಿ ಇರುವ ಏಜೆಂಟರುಗಳು ಕೂಡಲೇ ಹಣ ಸಂದಾಯ ಮಾಡಬೇಕೆಂದೂ, ಎಲ್ಲಾ ಏಜೆಂಟರುಗಳೂ ಬಿಲ್ಲು ದೊರೆತು ಹದಿನೈದು ದಿನಗಳೊಳಗೆ ಹಣ ಸಂದಾಯಮಾಡಿ ಸಹಕರಿಸಬೇಕೆಂದೂ ವಿನಂತಿ.

ಎಂ. ಕೆ. ಭಟ್
ಸಂಪಾದಕ
ಐಕ್ಯರಂಗ

ಆರ್ಥಿಕ ಸಮೀಕ್ಷೆ :

ಆರ್. ಚಂದ್ರ

ಕಾರ್ಮಿಕರಿಗೆ - ರೈತರಿಗೆ ಪಾವತಿ ಮಾಡುವುದನ್ನು ಮುಂದೂಡಿಕೊಂಡು ಬಂಡವಾಳಶಾಹಿಗಳು ಬೆಳೆಯುತ್ತಿದ್ದಾರೆ

ಬಂಡವಾಳಶಾಹಿ ಪದ್ಧತಿಯಲ್ಲಿ ಕಾರ್ಮಿಕರ ಶ್ರಮಕ್ಕನುಗುಣವಾಗಿ ಜೀವನಾವಶ್ಯಕ ವೇತನ ಕೊಡದೆ, ಕೈಗಾರಿಕೆಗೆ ಬೇಕಾದ ಕಚ್ಚಾವಸ್ತುಗಳನ್ನು ಒದಗಿಸುವ ಕೃಷಿ ಉತ್ಪಾದಕರಾದ ರೈತರಿಗೆ ನ್ಯಾಯ ಬೆಲೆ ಕೊಡದೆ, ಬಂಡವಾಳಗಾರರು ಕಾರ್ಮಿಕರನ್ನೂ ರೈತರನ್ನೂ ಶೋಷಿಸಿ ತಮ್ಮ ಬೊಕ್ಕಸವನ್ನು ಬೆಳೆಸಿಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದಿದೆ. ಹಾಗೆಯೇ ಕೈಗಾರಿಕಾ ಸಾಮಗ್ರಿಗಳನ್ನು ಕಾರ್ಮಿಕರಿಗೂ ರೈತರಿಗೂ ಅತಿ ಲಾಭದಲ್ಲಿ ಮಾರುಕಟ್ಟೆಯಲ್ಲಿ ವಿಕ್ರಯಿಸುವ ಮೂಲಕವೂ ಬಂಡವಾಳಗಾರರು ತಮ್ಮ ಬೊಕ್ಕಸವನ್ನು ಬೆಳೆಸಿಕೊಳ್ಳುತ್ತಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ. ಆದರೆ, ಕಾರ್ಮಿಕರಿಗೆ ಮತ್ತು ರೈತರಿಗೆ ಪಾವತಿ ಮಾಡುವುದನ್ನು ಮುಂದೂಡಿಕೊಂಡು ಬಂಡವಾಳಗಾರರು ಬೆಳೆಯುತ್ತಿರುವುದು ಸೂಕ್ಷ್ಮವಾಗಿ ಪರಿಶೀಲಿಸಿದರೆ ಮಾತ್ರ ತಿಳಿಯುವುದು.

ಸ್ವಾತಂತ್ರ್ಯಾನಂತರ ಅನೇಕ ಕೇಂದ್ರ ಹಾಗೂ ರಾಜ್ಯ ಶಾಸನಗಳು ಜಾರಿಗೆ ಬಂದರೂ, ಕಟ್ಟುನಿಟ್ಟಿನ ಆಡಳಿತ ಕ್ರಮಗಳನ್ನು ಕೈಕೊಂಡರೂ, ಇಂದಿಗೂ ಲಕ್ಷಾಂತರ ಕಾರ್ಮಿಕರಿಗೆ ನಿಗದಿತ ಸಮಯದಲ್ಲಿ ಸಂಬಳ, ತುಟ್ಟಿ ಭತ್ತೆ, ಬೋನಸ್, ಓವರ್ ಟೈಂ ಭತ್ತೆ, ಇತ್ಯಾದಿಗಳ ಪಾವತಿಯಾಗುತ್ತಿಲ್ಲ. ಅವರ ಸಂಬಳದಿಂದ ಪ್ರತಿ ತಿಂಗಳೂ ಪ್ರೊವಿಡೆಂಟ್‌ಫಂಡ್ (ಕ್ಷೇಮ ನಿಧಿ), ನಿವೃತ್ತಿ ವೇತನ ನಿಧಿ, ಜೀವವಿಮೆ ಮುಂತಾದವುಗಳಿಗೆ ವಂತಿಗೆ ವಸೂಲಿ ನಡೆಯುತ್ತಿದ್ದರೂ, ಅವುಗಳನ್ನು ಸಕಾಲದಲ್ಲಿ ಸಂಬಂಧಪಟ್ಟವರಿಗೆ ಪಾವತಿಮಾಡಲಾಗುತ್ತಿಲ್ಲ. ನಿವೃತ್ತ ಕಾರ್ಮಿಕರಿಗೆ, ಮೃತ ಕಾರ್ಮಿಕರ ವಾರಸುದಾರರಿಗೆ ಸಲ್ಲಬೇಕಾದ ಬಾಕಿ ಸಂಬಳ, ತುಟ್ಟಿಭತ್ತೆ, ಬೋನಸ್, ಪ್ರೊವಿಡೆಂಟ್‌ಫಂಡ್, ಗ್ರಾಚುಟಿ, ಇತ್ಯಾದಿಗಳು ಸಕಾಲದಲ್ಲಿ ಪಾವತಿಯಾಗುತ್ತಿಲ್ಲ. ಸಾಲಸೋಲಿನಲ್ಲಿರುವ ಕೈಗಾರಿಕಾ ಸಂಸ್ಥೆಗಳು ಕಾರ್ಮಿಕರ ಪ್ರೊವಿಡೆಂಟ್‌ಫಂಡ್, ಸಂಬಳ ಇತ್ಯಾದಿಗಳ ಬಾಕಿಯಿಂದ ತಮ್ಮ ವ್ಯವಹಾರಗಳನ್ನು ಇನ್ನಷ್ಟು ಸಮಯದವರೆಗೆ ಮುಂದುವರಿಸಿಕೊಂಡು ಹೋಗಲು ಪ್ರಯತ್ನಿಸುತ್ತಿವೆ. ಅರ್ಥಾತ್, ಬಂಡವಾಳಶಾಹಿ ಪದ್ಧತಿಯಲ್ಲಿ ಕಾರ್ಮಿಕರಿಗೆ ಸಲ್ಲಬೇಕಾದ ಸಂಬಳ, ತುಟ್ಟಿ ಭತ್ತೆ, ಬೋನಸ್, ಪ್ರೊವಿಡೆಂಟ್ ಫಂಡ್, ಜೀವವಿಮಾ ಕಂತು, ಇತ್ಯಾದಿಗಳ ಪಾವತಿಯನ್ನು ಬಾಕಿಮಾಡಿಕೊಂಡು, ಮುಂದೂಡಿಕೊಂಡು, ತಾತ್ಕಾಲಿಕ ಬಂಡವಾಳವನ್ನು ಬಡ್ಡಿ ಖರ್ಚು ಇಲ್ಲದೇ ಪಡೆಯುವ ಅತಿ ಚಾಣಾಕ್ಷತನದ ಸುಲಿಗೆ ಶೋಷಣೆ ನಡೆಯುತ್ತಿದೆ!

ಪ್ರೊವಿಡೆಂಟ್ ಫಂಡ್‌ನಲ್ಲಿ ವಂಚನೆ ಮೋಸ :

ಈ ಸಂದರ್ಭದಲ್ಲಿ, ಬಂಡವಾಳಗಾರರು ತಮ್ಮ ಕಾರ್ಮಿಕರ ಕ್ಷೇಮ ನಿಧಿಗಳಿಗೆ ಸಂಬಂಧಿಸಿದಂತೆ ನಡೆಸುವ ವಂಚನೆ, ಮೋಸ, ಅವ್ಯವಹಾರಗಳ ಕುರಿತು ಸ್ವಲ್ಪ ಪರಿಶೀಲಿಸೋಣ.

ಸಮಾಜ ಕಲ್ಯಾಣದ ಅಂಗವಾಗಿ 1952 ರಲ್ಲಿಯೇ ಕಾರ್ಮಿಕರ ಪ್ರೊವಿಡೆಂಟ್ ಫಂಡ್ ಯೋಜನೆಯು ದೇಶದ ಆರು ಪ್ರಮುಖ ಕೈಗಾರಿಕೆಗಳಾದ ಉಕ್ಕು ಮತ್ತು ಕಬ್ಬಿಣ, ಇಂಜಿನಿಯರಿಂಗ್, ಬಟ್ಟೆಗಳು, ಸಿಮೆಂಟ್ ಮತ್ತು ಸಿಗರೇಟ್ ಸಂಸ್ಥೆಗಳಲ್ಲಿ ಜಾರಿಗೆ ಬಂದಿತ್ತು. ಈ ಕೈಗಾರಿಕೆಗಳಲ್ಲಿ 1400 ಸಂಸ್ಥೆಗಳಲ್ಲಿ ದುಡಿಯುತ್ತಿದ್ದ 12 ಲಕ್ಷ ಕಾರ್ಮಿಕರಿಗೆ ಪ್ರೊವಿಡೆಂಟ್‌ಫಂಡ್ ಸೌಲಭ್ಯ ಒದಗಿಸಲಾಗಿತ್ತು. ಕಾಲಕ್ರಮೇಣ ದೇಶಾದ್ಯಂತ ಎಲ್ಲಾ ಸಂಘಟಿತ ಕೈಗಾರಿಕಾ ಸಂಸ್ಥೆಗಳ ಕಾರ್ಮಿಕರಿಗೂ ಪ್ರೊವಿಡೆಂಟ್ ಫಂಡ್ ಸೌಲಭ್ಯ ದೊರಕಬೇಕೆಂದು ಕೇಂದ್ರ ಶಾಸನವಿದ್ದರೂ, ಕೇಂದ್ರ ಹಾಗೂ ರಾಜ್ಯಗಳಲ್ಲಿ ಅದನ್ನು ಜಾರಿಗೊಳಿಸಲು ಅಧಿಕಾರಿ ವರ್ಗದವರನ್ನು ನೇಮಿಸಲಾಗಿದ್ದರೂ, ಈ ಸೌಲಭ್ಯದ ಪ್ರಗತಿ ನಿರೀಕ್ಷೆಗಿಂತ ಹಿಂದುಳಿಯಿತು. 27 ವರುಷಗಳ ನಂತರವೂ ಪ್ರೊವಿಡೆಂಟ್ ಫಂಡ್ ಸೌಲಭ್ಯವು ಕೇವಲ 154 ಕೈಗಾರಿಕೆಗಳಲ್ಲಿನ 85,000 ಸಂಸ್ಥೆಗಳಲ್ಲಿರುವ 95ಲಕ್ಷ ಕಾರ್ಮಿಕರಿಗೆ ದೊರೆಯುತ್ತಿದೆ. ಇನ್ನೂ ನೂರಾರು ಕೈಗಾರಿಕೆಗಳಲ್ಲಿನ, ಸಾವಿರಾರು ಸಂಸ್ಥೆಗಳಲ್ಲಿರುವ ಲಕ್ಷಾಂತರ ಕಾರ್ಮಿಕರಿಗೆ ಈ ಸೌಲಭ್ಯ ಸಿಗುತ್ತಿಲ್ಲ. ಕಾರ್ಮಿಕರನ್ನು ಕಂಟ್ರಾಕ್ಟರುಗಳ ಮೂಲಕ ನೇಮಿಸುವುದರಿಂದ, ತಾತ್ಕಾಲಿಕವಾಗಿ ನೇಮಿಸುವುದರಿಂದ, ಅವರ ಹಾಜರಾತಿಯ ದಾಖಲೆಗಳನ್ನು ಸರಿಯಾಗಿ ಇಡದೇ ಇರುವುದರಿಂದ ಅನೇಕ ಕೈಗಾರಿಕಾ ಸಂಸ್ಥೆಗಳು, ಬಂಡವಾಳಗಾರರು ತಮ್ಮ ಕಾರ್ಮಿಕರಿಗೆ ಪ್ರೊವಿಡೆಂಟ್ ಫಂಡ್ ಸೌಕರ್ಯ ನೀಡುತ್ತಿಲ್ಲ. ಪರಿಣಾಮವಾಗಿ, ಅಷ್ಟರಮಟ್ಟಿಗೆ ಅವರಿಗೆ ತಮ್ಮ ಕಾರ್ಮಿಕರ ಪ್ರೊವಿಡೆಂಟ್ ಫಂಡಿಗೆ ತಮ್ಮ ಪಾಲಿನ ವಂತಿಗೆಯನ್ನು ಉಳಿಸಿಕೊಂಡು ಲಾಭ ಹೆಚ್ಚಿಸಲು ಅನುಕೂಲವಾಯಿತು.

ಇನ್ನು ಕಾರ್ಮಿಕರ ಸಂಬಳದಿಂದ ಪ್ರೊವಿಡೆಂಟ್ ಫಂಡಿಗೆ ವಸೂಲಿ ಮಾಡಿದ ವಂತಿಗೆಯನ್ನು ಬಂಡವಾಳಗಾರರು ತಮ್ಮ ಪಾಲಿನ ವಂತಿಗೆಯೊಂದಿಗೆ ಸಂಬಂಧಪಟ್ಟ ಪ್ರಾದೇಶಿಕ ಪ್ರೊವಿಡೆಂಟ್ ಫಂಡ್ ಕಮೀಶನರುಗಳಿಗೆ ಪಾವತಿ ಮಾಡದೇ ಉಳಿದಿರುವ ಹಣದ ಮೊತ್ತವೇ ದೇಶಾದ್ಯಂತ ತಾ॥ 31-3-79ರಷ್ಟರಲ್ಲಿ ರೂ. 22 ಕೋಟಿಯಾಗಿದ್ದು, ಸೆಪ್ಟೆಂಬರ್ 1979 ರಲ್ಲಿ ರೂ 30 ಕೋಟಿಗೇರಿತು! ಈಗ ಈ ಬಾಕಿ ಹಣದ ಮೊತ್ತ ಇನ್ನಷ್ಟು ಹೆಚ್ಚಿರಬಹುದು. ಹಣದುಬ್ಬರವನ್ನು ತಡೆಯಲು ವಾಣಿಜ್ಯ ಬ್ಯಾಂಕುಗಳು ನೀಡುವ ಸಾಲಗಳಲ್ಲಿ ನಿಯಂತ್ರಣವನ್ನು ಹೇರಿದಾಗ, ಬಂಡವಾಳಗಾರರು ತಮ್ಮ ಕಾರ್ಮಿಕರಿಗೆ ಮತ್ತವರ ಕ್ಷೇಮ ನಿಧಿಗಳಿಗೆ ಪಾವತಿ ಮಾಡಬೇಕಾದುದನ್ನೇ ಮುಂದೂಡಿಕೊಂಡು ಬಡ್ಡಿ ಖರ್ಚು ಇಲ್ಲದೇ ತಾತ್ಕಾಲಿಕ ಬಂಡವಾಳವನ್ನು ತಮ್ಮ ವ್ಯವಹಾರಗಳಿಗೆ ಪಡೆಯುವರು, ಆ ಮೂಲಕ ಅಕ್ರಮವಾಗಿ ಅಧಿಕ ಲಾಭ ಗಿಟ್ಟಿಸುವರು.

ಪ್ರಾವಿಡೆಂಟ್ ಫಂಡ್ ವಂತಿಗೆಯನ್ನು ಸಕಾಲದಲ್ಲಿ ಸಂಬಂಧಪಟ್ಟ ಪ್ರಾದೇಶಿಕ ಕಮೀಶನರುಗಳಿಗೆ ಪಾವತಿ ಮಾಡದಿರುವ ಕುರಿತು ವರ್ಷಕ್ಕೆ ಸರಾಸರಿ 7000 ಅಪರಾಧಗಳು ಬೆಳಕಿಗೆ ಬಂದರೂ, ಅವುಗಳಿಗೆ ಸಂಬಂಧಿಸಿದ ಎಲ್ಲಾ ಅಪರಾಧಿಗಳನ್ನು ಶಿಕ್ಷಿಸಿದ ಯಾವುದೇ ವರದಿಗಳು ಇಲ್ಲ. ಅಂದರೆ, ಅಂತಹ ಅಪರಾಧಗಳು ಸರ್ವಸಾಮಾನ್ಯವಾಗಿದ್ದರೂ ಅಪರಾಧಿಗಳನ್ನು ಶಿಕ್ಷಿಸುವುದು ಅಪರೂಪ! ಕೇಂದ್ರ ಪ್ರೊವಿಡೆಂಟ್ ಫಂಡ್ ಕಾಯಿದೆಗನುಗುಣವಾಗಿ ಪ್ರೊವಿಡೆಂಟ್ ಫಂಡ್ ವಂತಿಗೆಯನ್ನು ಸಕಾಲದಲ್ಲಿ ಪಾವತಿ ಮಾಡದಿದ್ದರೆ, ಆ ಹಣವನ್ನು ತಮ್ಮ ವ್ಯವಹಾರಗಳಿಗೆ ಅವ್ಯವಹಾರಗಳಿಗೆ ದುರುಪಯೋಗಿಸಿದರೆ, ದೊಡ್ಡ ಸಾಮಾಜಿಕ ಅಪರಾಧವಾಗುವುದೆಂದೂ, ಶಿಕ್ಷಾರ್ಹವೆಂದೂ ಪರಿಗಣಿಸಲಾಗಿದೆ. ಪ್ರಸಿದ್ಧ ನ್ಯಾಯವಾದಿ ವಿ. ಆರ್. ಕೃಷ್ಣ ಅಯ್ಯರ್ ಸುಪ್ರೀಂ ಕೋರ್ಟಿನಲ್ಲಿ ಈ ಕುರಿತಾದ ಒಂದು ವಿವಾದದಲ್ಲಿ ತಮ್ಮ ತೀರ್ಪಿನಲ್ಲಿ ಇಂತಹ ಅಪರಾಧಗಳನ್ನು ಗಂಭೀರವಾಗಿ ಪರಿಗಣಿಸಬೇಕೆಂದು ತಿಳಿಸಿದ್ದಾರೆ. ಆದರೆ, ಅಪರಾಧಿಗಳನ್ನು ಶಿಕ್ಷಿಸಬೇಕಾದರೆ, ತೊಂದರೆಗೊಳಗಾದ ಕಾರ್ಮಿಕರು ಕೋರ್ಟಿಗೆ ಹೋಗುವಹಾಗಿಲ್ಲ. ಬದಲು ಸಂಬಂಧಪಟ್ಟ ಪ್ರಾದೇಶಿಕ ಪ್ರೊವಿಡೆಂಟ್ ಫಂಡ್ ಕಮೀಶನರುಗಳು ಹೈಕೋರ್ಟು ಸುಪ್ರೀಂ ಕೋರ್ಟುಗಳಿಗೆ ಅಪರಾಧಿಗಳ ವಿರುದ್ಧ ದಾವೆ ಹೂಡಬೇಕು. ಆದರೆ, ಬಂಡವಾಳಗಾರರ ಕೃಪಾಕಟಾಕ್ಷದಲ್ಲಿರುವ ಅಧಿಕಾರಿಗಳು ಅಪರಾಧಿಗಳ ವಿರುದ್ಧ ಕೋರ್ಟಿಗೆ ಹೆಚ್ಚಾಗಿ ಹೋಗಲಾರರು!

ದೇಶಾದ್ಯಂತ ಪ್ರೊವಿಡೆಂಟ್ ಫಂಡ್‌ನ ಮೊತ್ತ 1978ರಲ್ಲಿ ರೂ. 6000 ಕೋಟಿಗೂ ಮೀರಿತ್ತು. ಸರಕಾರವು ಈ ಅಪಾರ ಉಳಿತಾಯದಲ್ಲಿ ರೂ. 4300 ಕೋಟಿಯಷ್ಟು ಕಡಿಮೆ ಬಡ್ಡಿಯ ಸರಕಾರದ ಸಾರ್ವಜನಿಕ ಸಾಲ ಯೋಜನೆಗಳಲ್ಲಿ ವಿನಿಯೋಗಿಸಿತ್ತು. ಕಾರ್ಮಿಕರ ಉಳಿತಾಯಕ್ಕೆ ಆಕರ್ಷಕ ಆದಾಯವೂ ಇಲ್ಲ. ಇಂತಹ ಅಪಾರ ಉಳಿತಾಯವನ್ನು ರಾಷ್ಟ್ರೀಯ ಆರ್ಥಿಕ ಅಭಿವೃದ್ಧಿ ಯೋಜನೆಗಳಲ್ಲಿ ನೇರವಾಗಿ ವಿನಿಯೋಗಿಸುವುದೂ ಇಲ್ಲ. ಕಾರ್ಮಿಕರಿಗೆ ತಮ್ಮ ಸೇವಾ ಅವಧಿಯಲ್ಲಿ ಶಿಕ್ಷಣ, ಮದುವೆ, ಮನೆ ನಿರ್ಮಾಣ, ಮುಂತಾದ ಅತ್ಯಗತ್ಯದ ವಿಷಯಗಳಿಗೂ ಈ ಕ್ಷೇಮ ನಿಧಿಯಿಂದ ಸುಲಭವಾಗಿ, ಸಾಕಷ್ಟು, ಸಕಾಲದಲ್ಲಿ, ಕಡಿಮೆ ಬಡ್ಡಿಗೆ ಸಾಲ ಸೌಲಭ್ಯವೂ ಸಿಗುತ್ತಿಲ್ಲ.

ರೈತರಿಗೆ ಪಾವತಿ ಬಾಕಿ :

ಕೃಷಿ ಉತ್ಪಾದನೆಗಳನ್ನು ಆಧರಿಸಿರುವ ಸಕ್ಕರೆ, ಸೆಣಬು, ಹತ್ತಿಬಟ್ಟೆ, ಹೊಗೆಸೊಪ್ಪು, ಮುಂತಾದ ಕೈಗಾರಿಕೆಗಳಲ್ಲಿ ಬಂಡವಾಳಗಾರರು ಕೃಷಿ ಉತ್ಪಾದನೆಗಳಿಗೆ ರೈತರಿಗೆ ಸಕಾಲದಲ್ಲಿ ಸಾಕಷ್ಟು ಹಣ ಪಾವತಿ ಮಾಡದೆ, ಬೃಹತ್ ಪ್ರಮಾಣದಲ್ಲಿ ತಮ್ಮ ತಾತ್ಕಾಲಿಕ ಬಂಡವಾಳವನ್ನು ಪಡೆಯುತ್ತಾರೆ ಎಂಬುದು ರಿಸರ್ವ್ ಬ್ಯಾಂಕಿನ ಇತ್ತೀಚಿನ ಒಂದು ಅಧ್ಯಯನದಿಂದ ತಿಳಿದು ಬಂದಿದೆ. ಉದಾಹರಣೆಗೆ, ಬೀಡಿ ಕೈಗಾರಿಕೆಯನ್ನು ತೆಗೆದುಕೊಳ್ಳೋಣ. ಹೊಗೆಸೊಪ್ಪು ಬೆಳೆಗಾರರು ವ್ಯಾಪಾರಿಗಳಿಗೆ ತಮ್ಮ ಮಾಲನ್ನು ಮಾರಾಟ ಮಾಡಿದ ಕೂಡಲೇ ಹಣ ಪಡೆಯುವುದಿಲ್ಲ. ವ್ಯಾಪಾರಿಗಳು ಬೆಳೆಗಾರರಿಂದ ಹೊಗೆಸೊಪ್ಪನ್ನು ಸಾಲವಾಗಿಯೇ ಪಡೆಯುತ್ತಾರೆ. ಮುಂದೆ ಅವರು ಬೀಡಿ ಕಂಪೆನಿಗಳಿಗೆ ಹೊಗೆಸೊಪ್ಪು ಮಾರುವಾಗಲೂ ಮಾಲಕರಿಂದ ಒಮ್ಮೆಗೇ ಹಣ ಪಡೆಯುವುದಿಲ್ಲ. ಅವರು ಕಂಪೆನಿ ಮಾಲಕರಿಂದ ಕಂತುಕಂತಿನಲ್ಲಿ 2-3 ವರುಷಗಳಿಗಿಂತಲೂ ಹೆಚ್ಚು ದೀರ್ಘಾವಧಿಯಲ್ಲಿ ತಮ್ಮ ಮಾರಾಟದ ಹಣಪಡೆಯುತ್ತಾರೆ. ಪರಿಣಾಮವಾಗಿ, ವ್ಯಾಪಾರಿಗಳೂ ಹೊಗೆಸೊಪ್ಪು ಬೆಳೆಗಾರರಿಗೆ ಕಂತುಕಂತುಗಳಲ್ಲಿ 2-3 ವರುಷಗಳಿಗಿಂತಲೂ ಹೆಚ್ಚು ದೀರ್ಘಾವಧಿಯಲ್ಲಿ ತಮ್ಮ ಸಾಲ ತೀರಿಸುತ್ತಾರೆ. ಬೆಳೆಗಾರರಿಗೆ ಪಾವತಿಯಾಗಬೇಕಾದ ಹಣ ಬಾಕಿ ಮಾಡಿಕೊಂಡು ಹೊಗೆಸೊಪ್ಪು ವ್ಯಾಪಾರ ಮತ್ತು ಕೈಗಾರಿಕೆಗಳು ಬಡ್ಡಿ ಇಲ್ಲದೆ ಬಂಡವಾಳ ಪಡೆಯುತ್ತವೆ.

ರೈತರು ತಮ್ಮ ಫಸಲನ್ನು ಮಾರಾಟಮಾಡಿ ಆದಷ್ಟು ಬೇಗನೆ ಸಾಕಷ್ಟು ಹಣ ಪಡೆಯುವ ಆತುರದಲ್ಲಿರುವುದರಿಂದ ವ್ಯಾಪಾರಿಗಳ ಅನೇಕ ಕುತಂತ್ರಗಳಿಗೊಳಗಾಗುತ್ತಾರೆ. ಕೆಲವೊಮ್ಮೆ ಫಸಲು ಅಳೆದು ಕೊಡುವಾಗ ಪ್ರತಿ 20 ಕಿಲೋ ಭಾರಕ್ಕೆ ½ ಕಿಲೋ ಮಾಲು ಪುಕ್ಕಟೆಯಾಗಿ ಹೆಚ್ಚುಕೊಡಬೇಕಾಗುವುದು. ಕೆಲವೊಮ್ಮೆ ಫಸಲಿಗೆ ರಖಂ ಹಣ ಸಿಗಬೇಕಾದರೆ, ಬೆಲೆಯಲ್ಲಿ ಶೇ. 3 ರಿಂದ ಶೇ. 15ರಷ್ಟು ಮಾರುಕಟ್ಟೆಯ ಬೆಲೆಯಲ್ಲಿ ರಿಯಾಯತಿ ತೋರಿಸಬೇಕಾಗುವುದು. ಒಂದು ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚು ಹಣ ಮಾರಾಟದಿಂದ ಸಿಕ್ಕಿದರೆ, ಸ್ವಲ್ಪ ಚಿಲ್ಲರೆ ಹಣ ಪುಕ್ಕಟೆಯಾಗಿ ಮಾಫಿ ಬಿಡಬೇಕಾಗುವುದು. ಈ ಎಲ್ಲಾ ಕುತಂತ್ರಗಳಿಂದ, ಒತ್ತಾಯಗಳಿಂದ ರೈತರಿಗೆ ತಮ್ಮ ಫಸಲಿಗೆ ನ್ಯಾಯ ಬೆಲೆ ಸಿಗುವುದೂ ಇಲ್ಲ; ನಿಗದಿಯಾದ ಬೆಲೆಗೆ ಮಾರಾಟ ಮಾಡಿದರೂ ರಖಂ ಹಣ ಸಿಗುವುದೂ ಇಲ್ಲ; ವ್ಯಾಪಾರಿಗಳ ಕುತಂತ್ರಗಳಿಂದಾಗಿ ಸುಮಾರು ಶೇ. 20-25ರಷ್ಟು ಫಸಲನ್ನು ರೈತರು ವ್ಯಾಪಾರಿಗಳಿಗೆ ಪುಕ್ಕಟೆ ಬಿಟ್ಟುಕೊಡಬೇಕಾಗುವುದು: ವ್ಯಾಪಾರಿಗಳು ಬಂಡವಾಳವಿಲ್ಲದೇ ರೈತರಿಂದಲೇ ಬಲಾತ್ಕಾರವಾಗಿ ಸಾಲ ಪಡೆದು ತಮ್ಮ ವ್ಯಾಪಾರ ಕುದುರಿಸಿಕೊಳ್ಳುವರು; ಮತ್ತು ಕಂಪೆನಿ ಮಾಲಿಕರು ವ್ಯವಹಾರಬಂಡವಾಳ ಇಲ್ಲದೇ (working capital) ಕೃಷಿ ಉತ್ಪಾದನೆಗಳನ್ನು ವ್ಯಾಪಾರಿಗಳಿಂದ ಸಾಲವಾಗಿ ಪಡೆಯುವರು. ಸಾಲ ಮರುಪಾವತಿಯು ಮೂರು ವರ್ಷಗಳಿಗಿಂತಲೂ ಹೆಚ್ಚು ದೀರ್ಘವಾಗಿದ್ದು, ಕೆಲವೊಮ್ಮೆ ಸಂಪೂರ್ಣವಾಗಿ ಮರುಪಾವತಿಯಾಗದೇ ಉಳಿಯುವ ಸಂಭವವಿದೆ. ಸಾಲದ ಬಾಕಿಯನ್ನು ವ್ಯಾಪಾರಸ್ಥರಿಂದ ಪಡೆಯುವ ಆಸೆಯಿಂದ ರೈತ ಪುನಃ ಪುನಃ ತಮ್ಮ ಫಸಲನ್ನು ವ್ಯಾಪಾರಿಗಳಿಗೆ ಅನಿವಾರ್ಯವಾಗಿ ಹೊಸ ಸಾಲದ ಆಧಾರದಲ್ಲಿಯೇ ಮಾರುತ್ತಾರೆ. ಇಂತಹ ವಿಷವರ್ತುಲದಿಂದ ರೈತರಿಗೆ ಪಾವತಿಯಾಗುವುದನ್ನು ಬಾಕಿ ಉಳಿಸಿ ಬಂಡವಾಳಗಾರರು ತಮ್ಮ ತಾತ್ಕಾಲಿಕ ಬಂಡವಾಳ ಬಡ್ಡಿ ಇಲ್ಲದೇ ಪಡೆಯುತ್ತಾರೆ. ರೈತರನ್ನು ಶೋಷಿಸಿ ನಿರ್ಗತಿಕರನ್ನಾಗಿ ಮಾಡುತ್ತಾರೆ.

ಕಬ್ಬು, ಹೊಗೆಸೊಪ್ಪು, ಹತ್ತಿ, ಸೆಣಬು, ಮುಂತಾದವುಗಳ ಬೆಳೆಗಾರರೆಲ್ಲಾ ಇಂತಹ ಶೋಷಣೆಗೆ ಒಳಗಾಗಿದ್ದಾರೆ. ಇಂತಹ ಕೃಷಿ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಸಹಕಾರಿ ಪದ್ಧ

(6ನೇ ಪುಟ ನೋಡಿ)

ಅಫ್ಘಾನಿಸ್ತಾನದ ಬೆಳವಣಿಗೆ ಮತ್ತು ಅದರ ಹಿನ್ನೆಲೆ

—ಕಾಂ. ಎಂ. ಎಲ್. ರಾವ್

ಅಫ್‌ಘಾನಿಸ್ತಾನಕ್ಕೆ ಇತ್ತೀಚಿಗೆ ರಷ್ಯ ನೀಡಿದ ಸಹಾಯವು ದೊಡ್ಡ ಟೀಕೆಗೆ ಗುರಿಯಾಗಿದೆ. ಅದು ಆ ದೇಶದ ವಿರುದ್ಧ ರಷ್ಯದ ಆಕ್ರಮಣ ಮತ್ತು ಅಲ್ಲಿನ ಆಂತರಿಕ ವ್ಯವಹಾರಗಳಲ್ಲಿ ಬಾಹ್ಯ ಹಸ್ತಕ್ಷೇಪವೆಂಬ ಬೊಬ್ಬೆ ಜಾಗತಿಕ ಸಾಮ್ರಾಜ್ಯಶಾಹಿಗಳು ಮತ್ತು ಅವರ ಕೈಗೊಂಬೆಗಳಿಂದ ಕೇಳಿಬರುತ್ತಿದೆ. ಮೇಲ್ನೋಟಕ್ಕೆ ಇದು ಸರಿಯೆಂದು ತೋರಿದರೂ, ಜಗತ್ತಿನ ಎಲ್ಲಾ ಸ್ವತಂತ್ರ ರಾಷ್ಟ್ರಗಳ ವಿರುದ್ಧ ಅಮೇರಿಕನ್ ಸಾಮಾಜ್ಯಶಾಹಿಗಳು ನಡೆಸುತ್ತಿರುವ ಪಿತೂರಿಗಳನ್ನು ಅರಿತವರಿಗೆ ತಮ್ಮ ಕಾರಸ್ಥಾನಗಳನ್ನು ಮರೆಮಾಚಲೆತ್ನಿಸುವ ಸಾಮಾಜ್ಯಶಾಹಿಗಳ ತಂತ್ರವಿದೆಂಬುದು ಗೋಚರಿಸುತ್ತದೆ. ಆದ್ದರಿಂದ ಅಫ್‌ಘಾನ್ ಬೆಳವಣಿಗೆಯ ಹಿಂದಿರುವ ಸಾಮ್ರಾಜ್ಯಶಾಹಿ ಕೈವಾಡವನ್ನು ತಿಳಿಯುವುದು ಎಲ್ಲಾ ಸ್ವಾತಂತ್ರ್ಯಪ್ರಿಯ ಜನರ ಕರ್ತವ್ಯವಾಗಿದೆ.

ಏಪ್ರಿಲ್ 1978ರಲ್ಲಿ ಅಫ್‌ಘಾನಿಸ್ತಾನದಲ್ಲಿ ನಡೆದ ಕ್ರಾಂತಿಗೆ ತನ್ನದೇ ಇತಿಹಾಸವಿದೆ. ಇದಕ್ಕೂ ಮೊದಲು ಜಹೀರ್ ಷಾನ ಕ್ರೂರ ಸರಕಾರವನ್ನು ಉರುಳಿಸಿ ಅಧಿಕಾರಕ್ಕೆ ಬಂದ ದಾವೂದ್‌ಗೆ ಆಗಿನ ಏಕೈಕ ಪ್ರಗತಿಪರ ಪಕ್ಷವಾದ ಪೀಪಲ್ಸ್ ಡೆಮೊಕ್ರೆಟಿಕ್ ಪಾರ್ಟಿಯ ಬೆಂಬಲವಿತ್ತು. ಆದರೆ ಅಧಿಕಾರಕ್ಕೇರಿದ ಮೇಲೆ ದಾವೂದ್ ಕೂಡ ಜಹೀರ್ ಷಾನ ಹಾದಿಯನ್ನೇ ತುಳಿಯಲಾರಂಭಿಸಿದ. ಅವನ ಜನವಿರೋಧಿ ಆರ್ಥಿಕ ನೀತಿಗಳಿಂದ ಅಲ್ಲಿನ ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿತು.

ಇದೇ ಸಂದರ್ಭದಲ್ಲಿ ದಾವೂದ್ ಸರಕಾರದ ಬಗ್ಗೆ ಅನುಸರಿಸುವ ಧೋರಣೆಯ ದೃಷ್ಟಿಯಿಂದ ಪಿ. ಡಿ. ಪಿ. ಯಲ್ಲಿ ತೀವ್ರ ಭಿನ್ನಾಭಿಪ್ರಾಯ ತಲೆದೋರಿ ಪಕ್ಷವು ಒಡೆದು ಖಲ್ಕ್ ಮತ್ತು ಪರ್ಚಮ್ ಗಳೆಂಬ ಎರಡು ಗುಂಪುಗಳಾದುವು. ದಾವೂದ್ ಸರಕಾರದ ಜನವಿರೋಧೀ ನೀತಿಗಳು ಜನರ ಆಕ್ರೋಶವನ್ನು ದಿನೇ ದಿನೇ ಹೆಚ್ಚಿಸುತ್ತಿದ್ದವು. ಇದನ್ನು ತಡೆಯಲು ದಾವೂದ್ ಹೆಚ್ಚು ಹೆಚ್ಚಾಗಿ ದಮನಕಾರಿ ನೀತಿಗಳನು ಅನುಸರಿಸತೊಡಗಿದ. ಖಲ್ಕ್ ಮತ್ತು ಪರ್ಚಮ್ ಗಳ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ದಬ್ಬಾಳಿಕೆಯ ವಿರುದ್ಧ ಐಕ್ಯತೆಯಿಂದ ಹೋರಾಡುವ ಸಲುವಾಗಿ ಎರಡೂ ಗುಂಪುಗಳು ಪುನಃ ಒಂದಾದುವು.

ಇದೇ ಸಂದರ್ಭದಲ್ಲಿ ಪಿ. ಡಿ. ಪಿ. ನಾಯಕ ಮಹಮ್ಮದ್ ಖೈಬಿರ್ ಕೊಲೆ ಮಾಡಲ್ಪಟ್ಟ. ಆಗ ನಡೆದ ಶೋಕ ಮೆರವಣಿಗೆ ದಬ್ಬಾಳಿಕೆಯ ವಿರುದ್ಧ ಹೆಚ್ಚುತ್ತಿರುವ ಜನರ ಹೋರಾಟದ ಪೂರ್ವ ಸೂಚನೆಯಾಗಿತ್ತು. ಇದನ್ನು ಕಂಡು ಹೆದರಿದ ದಾವೂದ್ ಅನೇಕ ಮಂದಿ ಪಿ. ಡಿ. ಪಿ. ನಾಯಕರನ್ನು ಬಂಧಿಸಿ ಸೆರೆಮನೆಗೆ ತಳ್ಳಲು ಪ್ರಾರಂಭಿಸಿದ. ಅಂತಹವರಲ್ಲಿ ಇತ್ತೀಚಿಗೆ ಪದಚ್ಯುತನಾದ ಅಧ್ಯಕ್ಷ ಹಫೀಜುಲ್ಲಾ ಅಮೀನ್ ಒಬ್ಬನಾಗಿರಲಿಲ್ಲವೆಂಬುದು ಗಮನಾರ್ಹ. ಪಿ. ಡಿ. ಪಿ. ನಾಯಕರನ್ನು ಸೆರೆಮನೆಗಳಲ್ಲಿ ಕೊಲ್ಲುವುದೇ ದಾವೂದ್‌ನ ಉದ್ದೇಶವಾಗಿತ್ತು. ಆದರೆ ಇದರ ಸುಳಿವು ಹತ್ತಿದ ಪಿ. ಡಿ. ಪಿ. ಯ ಪ್ರಭಾವವಿದ್ದ ಸೈನ್ಯದ ಒಂದು ಭಾಗವು ಕರ್ನಲ್ ಖಾದಿರ್ ಎಂಬವನ ನಾಯಕತ್ವದಲ್ಲಿ ದಾವೂದ್‌ನನ್ನು ಅಧಿಕಾರದಿಂದ ಉರುಳಿಸಿತು. ಏಪ್ರಿಲ್ 1978ರಲ್ಲಿ ನಡೆದ ಈ ಕ್ರಾಂತಿಯ ಬಳಿಕ ನೂರ್ ಮಹಮ್ಮದ್ ತರಾಕಿಯ ನಾಯಕತ್ವದಲ್ಲಿ ಅಧಿಕಾರಕ್ಕೆ ಬಂದ ಹೊಸ ಕ್ರಾಂತಿಕಾರಿ ಸರಕಾರಕ್ಕೆ ದೇಶದ ಬಹುಪಾಲು ಜನರ ಬೆಂಬಲವಿತ್ತು.

ದಾವೂದ್ ಸರಕಾರದ ಪತನವಾದ ಕೂಡಲೇ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅಫ್‌ಘಾನಿಸ್ತಾನದ ವಿರುದ್ಧ ತಮ್ಮ ಪಿತೂರಿಯನ್ನು ಆರಂಭಿಸಿದ್ದರು ಅಲ್ಲಿ ನಡೆಯುತ್ತಿದ್ದ ಕ್ರಾಂತಿಯನ್ನು ಹಿಮ್ಮೆಟ್ಟಿಸಲು ಯೋಗ್ಯ ಅವಕಾಶಕ್ಕಾಗಿ ಹೊಂಚು ಹಾಕಿ ಕುಳಿತಿದ್ದರು. ದೇಶದ ಏಕೈಕ ಪ್ರಗತಿಪರ ಪಕ್ಷವಾದ ಪಿ ಡಿ ಪಿ. ಯ ಬಗ್ಗೆ ಜನರಿಗೆ ತುಂಬಾ ನಿರೀಕ್ಷೆಯಿತ್ತು. ಆದರೆ ಕ್ರಾಂತಿಯ ಸಾಮಾಜಿಕ ನೆಲೆ ತುಂಬಾ ದುರ್ಬಲವಾಗಿದ್ದುದು ಪಿ. ಡಿ. ಪಿ. ಗೆ ತಿಳಿದಿರಲಿಲ್ಲ. ಇಂತಹ ಸಂದರ್ಭದಲ್ಲಿ ಜನರಿಗೆ ಕೆಲವು ಪರಿಹಾರಗಳನ್ನು ತಕ್ಷಣ ಒದಗಿಸುವ ಮೂಲಕ ಪಕ್ಷದ ಪ್ರಭಾವವನ್ನು ಜನರ ನಡುವೆ ಬೀರುವುದು ಅತೀ ಅಗತ್ಯವಾಗಿತ್ತು. ತನ್ಮೂಲಕ ಪಕ್ಷದ ಐಕ್ಯತೆಯನ್ನು ಧೃಡಪಡಿಸಿ, ಜನರ ಸಂಘಟನೆಗಳನ್ನು ಬಲಪಡಿಸಬಹುದಿತ್ತಲ್ಲದೆ, ಕ್ರಾಂತಿಯ ಸಾಮಾಜಿಕ ನೆಲೆಯನ್ನು ವೃದ್ಧಿಸಲು ಇದೊಂದೇ ಮಾರ್ಗವಾಗಿತ್ತು. ರೈತರನ್ನು ಪರಿಣಾಮಕಾರಿಯಾಗಿ ಸಂಘಟಿಸಿ ಭೂಸುಧಾರಣೆಗಳನ್ನು ಕಾರ್ಯಗತಗೊಳಿಸುವುದು ಅಗತ್ಯವಾಗಿತ್ತು. ಆದರೆ ಈ ಕಾರ್ಯಕ್ರಮಗಳಲ್ಲಿ ಪಕ್ಷವು ಸೋತಿತ್ತು.

ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗಿದ್ದ ಹಫೀಜುಲ್ಲಾ ಅಮೀನ್, ಕ್ರಾಂತಿಯ ಬಳಿಕ ಜನನಾಯಕ ನೂರ್ ಮಹಮ್ಮದ್ ತರಾಕಿಯ ಬಲಗೈ ಬಂಟನಾಗಲು ಯತ್ನಿಸಿ ಸಫಲನಾದಿದ್ದ. ಅವನು ಕ್ರಾಂತಿಕಾರಿ ಚಟುವಟಿಕೆಗಳನ್ನು ಅಸ್ತವ್ಯಸ್ತಗೊಳಿಸಿ ತನ್ನ ಸ್ಥಾನವನ್ನು ಭದ್ರಪಡಿಸಲು ಪ್ರಾರಂಭಿಸಿದ್ದ. ಪಿ. ಡಿ. ಪಿ. ಯ ಘಟಕವಾದ ಪರ್ಚಮ್‌ನ ಮೇಲೆ ದಾಳಿ ಮಾಡುವಂತೆ ಆತ ತರಾಕಿಯನ್ನು ತಪ್ಪುದಾರಿಗೆ ಎಳೆದೊಯ್ದ. ಪರಿಣಾಮವಾಗಿ ಪರ್ಚಮ್ ನಾಯಕರನೇಕರು ಸೆರೆಮನೆಗೆ ತಳ್ಳಲ್ಪಟ್ಟರು. ಇನ್ನೂ ಕೆಲವರನ್ನು ಗಡೀಪಾರು ಮಾಡಲಾಯಿತು.

ಕ್ರಾಂತಿಯಿಂದ ಅಫ್‌ಘಾನ್ ಜನರು ನಿಜಕ್ಕೂ ತುಂಬಾ ಪ್ರಯೋಜನ ಪಡೆದಿದ್ದರು. ಭೂಸುಧಾರಣೆಗಳಿಂದ ಅನೇಕ ಬಡರೈತರು ತುಂಬಾ ಪ್ರಯೋಜನ ಪಡೆದಿದ್ದರು. ಆದರೆ ಪಕ್ಷದೊಳಗಿನ ಕಲಹಗಳಿಂದ ಈ ಪ್ರಯೋಜನಗಳನ್ನು ಭದ್ರಗೊಳಿಸಲು ಸಾಧ್ಯವಾಗಲಿಲ್ಲ. ಜನರ ಮೇಲೆ ಪಕ್ಷವು ತನ್ನ ಪ್ರಭಾವವನ್ನು ಬೀರಲು ಅಸಮರ್ಥವಾಯಿತು. ಪಕ್ಷದ ಆಂತರಿಕ ಕಲಹವು ಆಡಳಿತ ಮತ್ತು ಸೈನ್ಯದಲ್ಲೂ ಕಾಣಿಸಿಕೊಂಡು, ಇಂತಹ ಅವಕಾಶಕ್ಕಾಗಿ ಕಾಯುತ್ತಿದ್ದ ಸಾಮ್ರಾಜ್ಯಶಾಹಿಗಳಿಗೆ ಪಿತೂರಿ ನಡೆಸಲು ಅನುಕೂಲ ಪರಿಸ್ಥಿತಿಯನ್ನು ಒದಗಿಸಿತು.

ಪರಿಸ್ಥಿತಿ ಹತೋಟಿ ಮೀರುತ್ತಿರುವುದರ ಅರಿವು ತರಾಕಿಗೆ ತನ್ನ ಕೊನೆಯ ದಿನಗಳಲ್ಲಿ ಆಗತೊಡಗಿದ್ದರೂ ಸಮಯವು ಮಿಂಚಿ ಹೋಗಿತ್ತು. ತಪ್ಪುಗಳನ್ನು ಹುಡುಕಿ ಅವನ್ನು ಸರಿಪಡಿಸುವ ಮೊದಲೇ ಅಮೀನ್ ಅವನನ್ನು ಕಿತ್ತೊಗೆದು, ಅಧಿಕಾರವನ್ನು ವಶಪಡಿಸಿಕೊಂಡ. ತರಾಕಿಯ ಬೆಂಬಲಿಗರನ್ನು ಸೆರೆಮನೆಗೆ ತಳ್ಳಿ, ಪ್ರಮುಖ ಹುದ್ದೆಗಳಲ್ಲಿ ತನ್ನ ಜನರನ್ನು ನೇಮಿಸಲು ಆರಂಭಿಸಿದ. ಅವನ ಈ ಕೃತ್ಯಗಳು ದೇಶದ ಪ್ರಗತಿಪರ ಶಕ್ತಿಗಳಿಗೆ ಕೋಪವುಂಟುಮಾಡಿತ್ತು. ಅಮೀನ್ ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗಿ ವರ್ತಿಸುವುದು ಜನರಿಗೆ ಸ್ಪಷ್ಟವಾಗಿ ಗೋಚರಿಸುತಿತ್ತು. ಅವನ ಕೈಯಲ್ಲಿ ಏಪ್ರಿಲ್ ಕ್ರಾಂತಿಯು ಭದ್ರವಾಗಿ ಉಳಿಯುವುದಿಲ್ಲವೆಂಬುದು ಖಚಿತವಾಗಿತ್ತು.

ಬಾಬ್ರಕ್ ಕಾರ್ಮಲ್ ತರಾಕಿಯ ನಂತರದ ಜನಪ್ರಿಯ ನಾಯಕ. ಏಪ್ರಿಲ್ ಕ್ರಾಂತಿಯ ಬಳಿಕ ಆತ ಪ್ರಧಾನಿಯಾಗಿದ್ದ. ಅಮೀನ್ ಅಧಿಕಾರಕ್ಕೇರಿದ ತಕ್ಷಣ ಕಾರ್ಮಲನನ್ನು ಪದಚ್ಯುತಗೊಳಿಸಿ ಜೆಕೊಸ್ಲೊವಾಕಿಯಾದ ರಾಯಭಾರಿಯಾಗಿ ನೇಮಿಸಿದ್ದ. ಇದಾದ ಕೆಲವು ತಿಂಗಳುಗಳಲ್ಲೇ ಅವನು ವಜಾಮಾಡಲ್ಪಟ್ಟ. ಆದರೆ ಸ್ವದೇಶಕ್ಕೆ ಮರಳಿದರೆ ಸೆರೆವಾಸ ಅಥವಾ ಮರಣ ತಪ್ಪಿದ್ದಲ್ಲ ಎಂಬುದನ್ನು ಬಲ್ಲ ಆತ ಮರಳಲಿಲ್ಲ. ಅಮೀನ್ ಪದಚ್ಯುತನಾದ ಕೂಡಲೇ ಕಾರ್ಮಲ್ ಅಧಿಕಾರವಹಿಸಿದ. ಆದುದರಿಂದ ಏಪ್ರಿಲ್ ಕ್ರಾಂತಿಯ ಚರಿತ್ರೆಯಲ್ಲಿ ಇದು ಒಂದು ಪ್ರಾಮುಖ್ಯ ಘಟನೆಯಾಗಿದೆ. ಅಮೀನ್, ಮಾಡಿದ ತಪ್ಪುಗಳನ್ನು ಸರಿಪಡಿಸಲು ಯೋಗ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ ಕ್ರಾಂತಿಕಾರಿ ಸರಕಾರಕ್ಕೆ ಈಗ ರಶ್ಯಾ ನೀಡುತ್ತಿರುವ ಸಹಾಯವನ್ನು ಖಂಡಿಸುವುದರ ಹಿಂದಿರುವ ಸಾಮ್ರಾಜ್ಯಶಾಹಿಗಳ ಉದ್ದೇಶ ತಮ್ಮ ತಂತ್ರಗಳನ್ನು ಮುಚ್ಚಿಡುವುದೇ ಆಗಿದೆ. ನಮ್ಮ ದೇಶದ ಬಂಡವಾಳಶಾಹಿ-ಭೂಮಾಲಕ ಪಕ್ಷಗಳಾದ ಕಾಂಗ್ರೆಸ್, ಜನತಾ ಮತ್ತು ಲೋಕದಳಗಳೂ ರಶ್ಯಾದ ಈ ಸಹಾಯಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿವೆ. ಅವುಗಳ ಈ ನೀತಿಯನ್ನು ಪೊಲಿಟ್ ಬ್ಯೂರೋ ಹೇಳಿಕೆಯಲ್ಲಿ ನಮ್ಮ ಪಕ್ಷವು ಟೀಕಿಸಿದೆ.

ರಶ್ಯಾವು ಒಂದು ಸ್ವತಂತ್ರ ರಾಷ್ಟ್ರದ ಆಂತರಿಕ ವ್ಯವಹಾರಗಳಲ್ಲಿ ಅನ್ಯಾಯವಾಗಿ ಪ್ರವೇಶಿಸಿದೆಯೆಂದೂ, ಆದ್ದರಿಂದಲೇ ಅಫ್‌ಘಾನ್ ವಿದ್ಯಮಾನಗಳು ಆ ದೇಶದ ಆಂತರಿಕ ವ್ಯವಹಾರಗಳಾಗಿ ಉಳಿದಿಲ್ಲವೆಂದೂ ಸಾಮ್ರಾಜ್ಯಶಾಹಿಗಳು ಮತ್ತು ಅವರ ಕೈಗೊಂಬೆಗಳು ಅಲಿಪ್ತ ರಾಷ್ಟ್ರಗಳ ನಡುವೆ ಪ್ರಚಾರ ನಡೆಸಿವೆ. ರಶ್ಯಾ ನೀಡುತ್ತಿರುವ ಸಹಾಯ ಅಫ್‌ಘಾನಿಸ್ತಾನದ ಮೇಲೆ ಅದರ ಆಕ್ರಮಣವೆಂಬವರೆಗೆ ಅವರು ಹೋಗಿದ್ದಾರೆ.

ಅಫ್‌ಘಾನ್ ವಿದ್ಯಮಾನಗಳನ್ನು ಒಂದು ಅಂತರಾಷ್ಟ್ರೀಯ ವಿವಾದವಾಗಿ ಪರಿವರ್ತಿಸಿ ಮಧ್ಯೆ ಪ್ರವೇಶಿಸುವ ಸಲುವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಭದ್ರತಾ ಸಮಿತಿಯ ತುರ್ತುಸಭೆಯನ್ನು ಕರೆದಿದ್ದಾರೆ, ಅಧ್ಯಕ್ಷ ಕಾರ್ಟರ್ ರಶ್ಯಾಕ್ಕೆ ಎಚ್ಚರಿಕೆ ನೀಡಿದ್ದಾರಲ್ಲದೆ, ಮಧ್ಯೆ ಪ್ರವೇಶಿಸಲು ತಯಾರಾಗುವಂತೆ ನ್ಯಾಟೋ ರಾಷ್ಟ್ರಗಳಿಗೆ ಕರೆಯಿತ್ತಿದ್ದಾರೆ. ರಶ್ಯಾ ಆಕ್ರಮಣದ ಪೆಡಂಭೂತವನ್ನು ಸೃಷ್ಟಿಸಿದ ಸಾಮ್ರಾಜ್ಯಶಾಹಿಗಳು, ಪಾಕಿಸ್ತಾನವನ್ನು ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸುತ್ತಿರುವರಲ್ಲದೆ, ಈ ಪ್ರದೇಶದಲ್ಲಿ ತಮ್ಮ ಮಿಲಿಟರಿ ನೆಲೆಗಳನ್ನು ಸ್ಥಾಪಿಸಲು ಭರದಿಂದ ಕಾರ್ಯವೆಸಗುತ್ತಿದ್ದಾರೆ. ಅಮೇರಿಕಕ್ಕೆ ತೈಲ ಪೂರೈಸುತ್ತಿರುವ ಅರಬ್ ರಾಷ್ಟ್ರಗಳ ತೈಲ ನಿಕ್ಷೇಪಗಳನ್ನು ರಶ್ಯಾ ವಶಪಡಿಸಿಕೊಳ್ಳಲು ಹವಣಿಸುತ್ತಿದೆಯೆಂಬ ಇತ್ತೀಚಿಗಿನ ಅಪಪ್ರಚಾರ ಸಾಮ್ರಾಜ್ಯಶಾಹಿಗಳ ಈ ತಂತ್ರದ ಒಂದು ಭಾಗವಾಗಿದೆ. ಅವರ ಈ ತಂತ್ರ ಅಫ್‌ಘಾನಿಸ್ತಾನ್ ಮಾತ್ರವಲ್ಲದೆ, ದಕ್ಷಿಣ ಮತ್ತು ಪಶ್ಚಿಮ ಏಶ್ಯಾಗಳಿಗೂ ಗಂಡಾಂತರಕಾರಿಯಾಗಿವೆ.

ಅಫ್‌ಘಾನ್ ವಿದ್ಯಮಾನಗಳ ಬಗ್ಗೆ ಮತ್ತು ಆ ದೇಶದ ಸ್ವಾತಂತ್ರ್ಯ ಹಾಗೂ ಸಾರ್ವಭೌಮತೆಯ ಕುರಿತಾದ ಸಾಮ್ರಾಜ್ಯಶಾಹಿಗಳ ಕಳವಳ ಕೇವಲ ಒಂದು ನಾಟಕವಾಗಿದೆ. ಯಾವುದೇ ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಸಾರ್ವಭೌಮತೆಯನ್ನು ಕಾಪಾಡುವುದರಲ್ಲಿ ಅವರಿಗಿರುವ ಆಸಕ್ತಿ ಎಷ್ಟೆಂಬುದು, ಸಿ. ಐ. ಎ. ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಮೂಲಕ ಇವರು ಜಗತ್ತಿನ ಎಲ್ಲಾ ಪ್ರಗತಿಪರ ರಾಷ್ಟ್ರಗಳ ವಿರುದ್ಧ ನಡೆಸುತ್ತಿರುವ ಕಾರಸ್ಥಾನಗಳಿಂದ ರುಜುವಾಗುತ್ತದೆ. ಅವರ ನಿಜವಾದ ಆಸಕ್ತಿಗೆ ದಕ್ಷಿಣ ಅಮೇರಿಕದ ಚಿಲಿ, ವರ್ಣದ್ವೇಷದ ವಿರುದ್ಧ ಹೋರಾಡುತ್ತಿರುವ ದಕ್ಷಿಣ ಆಫ್ರಿಕನರು, ಅರಬ್ ಹಾಗೂ ಏಶ್ಯಾದ ಕೆಲವು ರಾಷ್ಟ್ರಗಳೇ ನಿದರ್ಶನಗಳು. ಬಂಗ್ಲಾದೇಶ ವಿಮೋಚನಾ ಸಮರವನ್ನು ಹತ್ತಿಕ್ಕಲು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪಾಕಿಸ್ತಾನದ ಮಿಲಿಟರಿ ಸರಕಾರದ ನೆರವಿಗೆ ಬಂದುದು ಇವರ ಪಿತೂರಿಗೆ ಒಂದು ಸಾಕ್ಷಿ. ಇರಾನಿನ ಜನತೆಯನ್ನು ಚಿತ್ರಹಿಂಸೆ ಮತ್ತು ಕಷ್ಟಕಾರ್ಪಣ್ಯಗಳಿಗೆ ಗುರಿಪಡಿಸುವಲ್ಲಿ ಷಾನಿಗೆ ಸಿ. ಐ. ಎ.ಯ ಬೆಂಬಲವಿತ್ತು. ಅಮೇರಿಕನ್ ಒತ್ತೆಯಾಳುಗಳಿಂದ ವಶಪಡಿಸಿಕೊಳ್ಳಲಾದ ದಾಖಲೆಗಳಿಂದ ಈ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಪಿತೂರಿಗಳು ಬಟ್ಟಬಯಲಾಗಿವೆ. ಭಾರತ ಉಪಖಂಡದಲ್ಲಿ ತೀವ್ರ ಅಶಾಂತಿಯುತ ವಾತಾವರಣವನ್ನು ಉಂಟುಮಾಡುವ ಉದ್ದೇಶದಿಂದ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪಾಕಿಸ್ತಾನವನ್ನು ಆಧುನಿಕ ಶಸ್ತ್ರಗಳಿಂದ ಸಜ್ಜುಗೊಳಿಸುವುದರ ಮೂಲಕ ತಮ್ಮ ಹಿಂದಿನ ಧೋರಣೆಯನ್ನು ಬದಲಿಸಿದ್ದಾರೆ.

ಏಪ್ರಿಲ್ ಕ್ರಾಂತಿಯ ಬಳಿಕವೂ ಅವರು ಪಾಕಿಸ್ತಾನದಲ್ಲಿ ಆಶ್ರಯ ಪಡೆದಿರುವ ಅಫ್‌ಘಾನ್ ಪ್ರತಿಗಾಮಿಗಳನ್ನು ಪ್ರಚೋದಿಸುವುದಲ್ಲದೆ, ಅವರನ್ನು ಶಸ್ತ್ರಸಜ್ಜಿತರಾಗಿಸಿ, ಕ್ರಾಂತಿಕಾರಿ ಸರಕಾರದ ವಿರುದ್ಧ ಹೋರಾಡಲು ಅವರಿಗೆ ತರಬೇತು ನೀಡುತ್ತಿದ್ದರು. ಈ ದುಷ್ಕೃತ್ಯದಲ್ಲಿ ಅವರಿಗೆ ಪಾಕಿಸ್ತಾನದ ಮಿಲಿಟರಿ ಸರಕಾರದ ನೆರವು ದೊರೆತಿದೆ.

ನಮ್ಮ ದೇಶದ ಅಸ್ಸಾಂ ಮತ್ತು ಈಶಾನ್ಯ ಭಾಗದ ಉಳಿದೆಡೆಗಳಲ್ಲಿ ಕೋಮುವಾದಿ ಶಕ್ತಿಗಳನ್ನು ಪ್ರಚೋದಿಸುತ್ತಿರುವ ಸಿ. ಐ. ಎ. ಮತ್ತು ಸಾಮ್ರಾಜ್ಯಶಾಹಿಗಳ ತಂತ್ರ ಈಗ ಬಯಲಾಗಿದೆ. ಅಫ್‌ಘಾನ್ ವ್ಯವಹಾರಗಳಲ್ಲಿ ಪ್ರವೇಶಿಸಿ ಕ್ರಾಂತಿಯನ್ನು ತಡೆಯುವ ಉದ್ದೇಶದಿಂದ ಪಾಕಿಸ್ತಾನದಲ್ಲಿ ಆಶ್ರಯ ಪಡೆದಿರುವ ಅಫ್‌ಘಾನ್ ಪ್ರತಿಗಾಮಿಗಳನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಶಸ್ತ್ರಸಜ್ಜಿತಗೊಳಿಸುತ್ತಿದ್ದಾರೆ. ಅವರ ಈ ತಂತ್ರದ ಬಗ್ಗೆ ಮೌನದಿಂದಿರುವ ನಮ್ಮ ದೇಶದ ಪ್ರತಿಗಾಮಿಗಳು ರಷ್ಯ ನೀಡುತ್ತಿರುವ ಸಹಾಯದ ವಿರುದ್ಧ ಬೊಬ್ಬಿಡುತ್ತಿರುವುದು ನಿಜಕ್ಕೂ ಆಶ್ಚರ್ಯಕರ. ಅಫ್‌ಘಾನ್ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಯ ಬಗ್ಗೆ ಸಾಮ್ರಾಜ್ಯಶಾಹಿಗಳಿಗೆ ಏನೂ ಕಾಳಜಿಯಿಲ್ಲ ಮಾತ್ರವಲ್ಲದೆ ಕ್ರಾಂತಿಯನ್ನು ಹತ್ತಿಕ್ಕಿ ಪ್ರಗತಿಪರ ಸರಕಾರವನ್ನು ಉರುಳಿಸುವುದೇ ಅವರ ನಿಜವಾದ ಉದ್ದೇಶವೆಂಬುದಕ್ಕೆ ಭಾರತದಂತಹ ದೇಶದಲ್ಲಿ ಅವರು ನಡೆಸುತ್ತಿರುವ ಷಡ್ಯಂತ್ರಗಳೇ ಸಾಕ್ಷಿ.

ರಷ್ಯ ಅಫ್‌ಘಾನಿಸ್ತಾನಕ್ಕೆ ಸಹಾಯ ನೀಡಲು ಇದ್ದ ನಿಜವಾದ ಕಾರಣವನ್ನು ತಿಳಿಯುವುದು ಅಗತ್ಯ. ಅಫ್‌ಘಾನಿಸ್ತಾನ್ ಮತ್ತು ರಷ್ಯಗಳು ದಶಂಬರ 1978ರಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿದವು. ಅದರ ಪ್ರಕಾರ ಉಭಯ ದೇಶಗಳೂ ಆಕ್ರಮಣ ಅಥವಾ ಬಾಹ್ಯ ಹಸ್ತಕ್ಷೇಪದಂತಹ ಸಂದರ್ಭಗಳಲ್ಲಿ ಪರಸ್ಪರ ಸಹಾಯ ಮಾಡಲು ಒಪ್ಪಿದವು. ರಷ್ಯ ಈಗ ನೀಡುತ್ತಿರುವ ಸಹಾಯವು ಆ ಒಪ್ಪಂದದ ಪ್ರಕಾರವೇ ಆಗಿದೆ. ಅಫ್‌ಘಾನಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ಸಾಮ್ರಾಜ್ಯಶಾಹಿ ಹಸ್ತಕ್ಷೇಪವನ್ನು ಅಲ್ಲಗಳೆಯುವಂತಿಲ್ಲ. ಪ್ರತಿಗಾಮಿಗಳಿಗೆ ಅವರು ನೀಡುತ್ತಿರುವ ಶಸ್ತ್ರಗಳ ಪೂರೈಕೆಯೇ ಇದಕ್ಕೆ ಸಾಕ್ಷಿ. ಇಂತಹ ಸಹಾಯವಿಲ್ಲದೆ ಅಫ್‌ಘಾನ್ ಗಡಿ ಪ್ರದೇಶದಲ್ಲಿರುವ ಪ್ರತಿಗಾಮಿಗಳು ಬುಡಮೇಲು ಕೃತ್ಯಗಳಲ್ಲಿ ತೊಡಗುವುದು ಅಸಾಧ್ಯವಾಗಿತ್ತು. ಅಫ್‌ಘಾನಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ಪ್ರವೇಶಿಸಲು ಅವರು ಪಾಕಿಸ್ತಾನವನ್ನು ಉಪಯೋಗಿಸುತ್ತಿರುವುದು ಮತ್ತು ಅವರ ಈ ಚಟುವಟಿಕೆಗಳು ಅಫ್‌ಘಾನಿಸ್ತಾನದ ಸಾರ್ವಭೌಮತೆ, ಐಕ್ಯತೆ ಮತ್ತು ಸ್ವಾತಂತ್ರ್ಯಗಳಿಗೆ ಧಕ್ಕೆಯುಂಟು ಮಾಡುತ್ತಿರುವುದು ಸರ್ವವಿದಿತ.

ಯಾವುದೇ ಸ್ವತಂತ್ರ ರಾಷ್ಟ್ರವು ತನ್ನ ವ್ಯವಹಾರಗಳಲ್ಲಿ ಸಾಮ್ರಾಜ್ಯಶಾಹಿ ಹಸ್ತಕ್ಷೇಪವನ್ನು ಸಹಿಸುವುದಿಲ್ಲ. ಅಫ್‌ಘಾನಿಸ್ತಾನವು ಇಂತಹ ಹಸ್ತಕ್ಷೇಪವನ್ನು ತಡೆಯುವ ಉದ್ದೇಶದಿಂದಲೇ ರಷ್ಯದಿಂದ ನೆರವು ಪಡೆದಿದೆ. ಆದ್ದರಿಂದ ರಷ್ಯದ ಈ ಸಹಾಯವನ್ನು ಹಸ್ತಕ್ಷೇಪವೆಂದು ಖಂಡಿಸುವುದು ಅನ್ಯಾಯ. ರಷ್ಯದ ಸಹಾಯವು ಸಾಮ್ರಾಜ್ಯಶಾಹಿ ಹಸ್ತಕ್ಷೇಪವನ್ನು ತಡೆಯುವುದಕ್ಕಾಗಿಯಲ್ಲದೆ ಸ್ವತಃ ಹಸ್ತಕ್ಷೇಪವಲ್ಲವೆಂಬುದು ಸ್ಪಷ್ಟ.

ಆದರೆ ತಮ್ಮ ನಿಜವಾದ ಉದ್ದೇಶವನ್ನು ಮರೆಮಾಡುವ ದೃಷ್ಟಿಯಿಂದ ಸಾಮ್ರಾಜ್ಯಶಾಹಿಗಳು ಮತ್ತು ಅವರ ಕೈಗೊಂಬೆಗಳು ರಷ್ಯದ ಸಹಾಯವನ್ನು ಹಸ್ತಕ್ಷೇಪವೆಂದು ಕರೆಯುತ್ತಿದ್ದಾರೆ. ನಿಜವಾದ ಪ್ರಗತಿಪರ ಸರಕಾರವು ಅಸ್ತಿತ್ವಕ್ಕೆ ಬರುವುದು ಪ್ರತಿಗಾಮಿಗಳಿಗೆ ಬೇಕಿಲ್ಲ. ಯಾಕೆಂದರೆ ಅಂತಹ ಸರಕಾರವು ದೇಶದ ಹೊರಗಿನ ಮತ್ತು ಒಳಗಿನ ಪ್ರತಿಗಾಮಿಗಳ ವಿರುದ್ಧ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಬಲ್ಲದು. ಇಂತಹ ಸರಕಾರವೊಂದು ಅಸ್ತಿತ್ವಕ್ಕೆ ಬರುವುದನ್ನು ತಡೆಯುವ ಉದ್ದೇಶದಿಂದಲೇ ದಾವೂದ್ ಸರಕಾರ ಉರುಳಿದ ಮರುಕ್ಷಣದಿಂದಲೇ ಸಾಮ್ರಾಜ್ಯಶಾಹಿಗಳ ಕುತಂತ್ರ ಆರಂಭವಾದದ್ದು. ಇದರ ವಿರುದ್ಧ ಹೋರಾಡುವುದೇ ರಷ್ಯ ನೀಡುತ್ತಿರುವ ಸಹಾಯದ ಹಿಂದಿರುವ ನಿಜವಾದ ಉದ್ದೇಶ. ಸಾಮ್ರಾಜ್ಯಶಾಹಿಗಳ ಈ ಕುತಂತ್ರವು ಮುರಿಪಾಲಾದ ಮರುಕ್ಷಣವೇ ತನ್ನ ಸೈನ್ಯವನ್ನು ಹಿಂದೆಗೆಯುವುದಾಗಿ ರಷ್ಯ ಸಾರಿದೆ.

ಆದರೆ ಅಮೀನ್ ಅನುಸರಿಸಿದ ನೀತಿಗಳಿಂದ ಕೆಲವು ಹೊಸ ಸಮಸ್ಯೆಗಳು ಉಂಟಾಗಿವೆ. ಪಕ್ಷದ ಪ್ರಾಧಾನ್ಯತೆಯನ್ನು ಸ್ಥಾಪಿಸುವುದು ಮತ್ತು ಸ್ಥಿರ ಸರಕಾರವನ್ನು ಒದಗಿಸುವುದು ಪಕ್ಷದ ಪ್ರಮುಖ ಕರ್ತವ್ಯಗಳಾಗಿವೆ. ಜನಪರ ನೀತಿಗಳನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಪಕ್ಷ ಮತ್ತು ಸರಕಾರಗಳು ತಮ್ಮ ಪ್ರಭಾವವನ್ನು ಜನರ ಮಧ್ಯೆ ಬಲಪಡಿಸಬೇಕಾಗುತ್ತದೆ. ಹೊಸ ಕ್ರಾಂತಿಕಾರಿ ಸರಕಾರದ ನೇತೃತ್ವದಲ್ಲಿ ಅಫ್‌ಘಾನ್ ಜನರು ಖಂಡಿತವಾಗಿಯೂ ಏಪ್ರಿಲ್ ಕ್ರಾಂತಿಯನ್ನು ಮುಂದುವರಿಸುವರಲ್ಲದೆ, ಸಾಮ್ರಾಜ್ಯಶಾಹಿಗಳ ಷಡ್ಯಂತ್ರಗಳನ್ನು ಸೋಲಿಸುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯದಲ್ಲಿ ಅವರಿಗೆ ಜಗತ್ತಿನ ಎಲ್ಲಾ ಪ್ರಗತಿಪರ ಶಕ್ತಿಗಳ ಬೆಂಬಲದ ಅಗತ್ಯವಿದೆ.

●

ಸಖರೋವ್ ಬಗ್ಗೆ ತೆಗೆದುಕೊಂಡ ನಿರ್ಣಯ ನ್ಯಾಯಯುತವಾದದ್ದು

ಅಕಾದೆಮಿಷಿಯನ್ ಸಖರೋವ್ ಅವರಿಗಿದ್ದ "ಸಮಾಜವಾದೀ ಶ್ರಮವೀರ" ಮತ್ತು ಬೇರೆ ಸರ್ಕಾರಿ ಪದವಿ-ಪ್ರಶಸ್ತಿಗಳನ್ನೆಲ್ಲ ಹಿಂತೆಗೆದುಕೊಳ್ಳಲಾಗಿದೆ. ನಿಜ, ಇದು ಅತಿಶಯದ ಕ್ರಮ; ಆದರೆ ನ್ಯಾಯವಾದ ಕ್ರಮ.

ಸಖರೋವ್ ಯಾರು? ಅವರು ಯಾರ ಸೇವೆ ಗೈಯ್ಯುತ್ತಿದ್ದರು? ನಮ್ಮ ದೇಶದ ಮತ್ತು ಸೋವಿಯೆತ್ ಜನತೆಯ ಹಿತಾಸಕ್ತಿಗಳಿಗೆ ಬಹಿರಂಗ ದ್ರೋಹ ಬಗೆಯುವ ಹಾದಿಯನ್ನು ಅವರು ಹಿಡಿದಿದ್ದರು. ಆತ ಸಮಾಜವಾದೀ ವ್ಯವಸ್ಥೆಗೆ ಭ್ರಮಿಷ್ಟ ವೈರಿಯಾದರು, ಯುದ್ಧಕೋರ ಕಮ್ಯುನಿಸ್ಟ್ ವಿರೋಧಿಪಾಳೆಯದಲ್ಲಿ ತಳವೂರಿದರು, ಮತ್ತೆ ಶೀತಲಯುದ್ಧದ ಶತಮೊಂಡ ಪ್ರತಿಪಾದಕನಾದರು. ಅವರು ಸೇವೆ ಮಾಡಲಾರಂಭಿಸಿದ್ದು ಇಂಥ ಶಕ್ತಿಗಳನ್ನು. ಜಾರಿಬಿದ್ದದ್ದು ಪ್ರತಿಗಾಮೀ ಹುದುಲಿನ ಹೊಂಡದಲ್ಲಿ.

ನಮ್ಮ ವೈರಿಗಳು-ಸಾಮ್ರಾಜ್ಯಶಾಹಿಗಳು ಮತ್ತು ತರಹೆವಾರಿ ಕಮ್ಯುನಿಸ್ಟ್ ವಿರೋಧಿಗಳು ಸಖರೋವ್‌ನನ್ನು ಒಬ್ಬ ಶೂರನನ್ನಾಗಿಸಿದರು. ಯಾಕೆಂದರೆ-ಸೋವಿಯೆತ್ ಒಕ್ಕೂಟ ಮತ್ತು ಬೇರೆ ಸಮಾಜವಾದಿ ಸಮುದಾಯದ ದೇಶಗಳ ವಿರುದ್ಧ ಸೈದ್ಧಾಂತಿಕ ಬುಡಮೇಲು ಕೃತ್ಯಗಳಿಗೆ ಅವರೊಬ್ಬರು ಕೈಗೆ ಹವಣಿಯಾದ ಉಪಕರಣವಾಗಿ ಕಂಡರು.

ವಿಚಾರಗಳ ತಾಕಲಾಟ ಹೊಸತೇನಲ್ಲ. ಅದೇನು ನಿನ್ನೆಯಷ್ಟೇ ಹುಟ್ಟಿಲ್ಲ ಮತ್ತು ನಾಳೆಯೇನು ಸತ್ತುಹೋಗುವುದಿಲ್ಲ. ಶಾಂತಿಯುತ ಸಹಬಾಳ್ವೆ ಮತ್ತು ಪ್ರಕ್ಷುಬ್ಧತೆಯ ಉಪಶಮನವನ್ನು ಪ್ರತಿಪಾದಿಸುವ ಕಮ್ಯುನಿಸ್ಟರು, ಅದೇ ಕಾಲಕ್ಕೆ, ವಿಭಿನ್ನ ಸಮಾಜ ವ್ಯವಸ್ಥೆ ರಾಜ್ಯಗಳ ನಡುವಣ ಸಂಬಂಧಗಳಲ್ಲಿ "ಶಾಂತಿಯುತ ಸೈದ್ಧಾಂತಿಕ ಸಹಬಾಳ್ವೆ" ಎಂದೂ ಇರಲಿಲ್ಲ, ಇರುವುದೂ ಇಲ್ಲ ಎಂಬುದನ್ನೂ ಬಲ್ಲರು.

ಪಶ್ಚಿಮದವರು ಅಕಾದೆಮಿಷಿಯನ್ ಸಖರೋವ್‌ನನ್ನು ಬಲೆಗೆ ಹಾಕಿಕೊಂಡದ್ದು ಹ್ಯಾಗೆ?

ಅನೇಕ ವರ್ಷಗಳ ಹಿಂದೆ, ಭೌತವಿಜ್ಞಾನ ಕ್ಷೇತ್ರದಲ್ಲಿ ತಾತ್ವಿಕ ಸಂಶೋಧನೆಯಿಂದ ಬೇಸತ್ತ ಸಖರೋವ್ ಸೃಜನಾತ್ಮಕವಾಗಿ ಕಾರ್ಯ ಇನ್ನು ಸಾಧ್ಯವಿಲ್ಲವೆಂದು ಭಾವಿಸಿದಾಗ ರಾಜಕಾರಣದಲ್ಲಿ ಕುಖ್ಯಾತಿ ಸಂಪಾದಿಸಲು ಹೊರಟರು. ತಮ್ಮ ನ್ಯೂಕ್ಲಿಯರ್ ಭೌತವಿಜ್ಞಾನದಲ್ಲಿ ತಾವು ಮಾಡುತ್ತಿರುವ ಕಾರ್ಯ ತಮ್ಮ "ರಾಜಕೀಯ ಹೋರಾಟ"ಕ್ಕೆ ಅಡ್ಡಬರುವುದಾದರೆ "ರಾಜಕಾರಣವನ್ನೇ ಆರಿಸಿಕೊಂಡು" ಅದನ್ನು ಬಿಟ್ಟುಬಿಡುವುದಾಗಿ ಕೂಡ ಹೇಳಿದರು.

ಇಂಥ ಸನ್ನಿವೇಶದಲ್ಲೇ ಆತ ಥರ್ಮೋನ್ಯೂಕ್ಲಿಯರ್ ಯುದ್ಧಭಯವನ್ನು ತೊಡೆದು ಹಾಕುವುದಕ್ಕೆ ಸಮಾಜವಾದವು ಬಂಡವಾಳವಾದಕ್ಕೆ ಶರಣಾಗಬೇಕೆಂಬ ಅದ್ಭುತ ಅಸಂಬದ್ಧ ಪ್ರಮೇಯವನ್ನು ಸಾರಿದರು. ಅಸಂಬದ್ಧ. ಅಸಂಬದ್ಧವೆ-ಅವು ಅಕಾದೆಮಿಷಿಯನ್‌ನ ಬಾಯಿಂದ ಬಂದರೂ. ಈ ಮಧ್ಯೆ ಪಶ್ಚಿಮವೂ ತಾವೀಗ ತಪ್ಪಿಸಿಕೊಳ್ಳಬಾರದಂಥ ಅವಕಾಶ ದೊರತಿದೆಯೆಂದು ಕಂಡುಕೊಂಡಿತು. ಹಾಗೆ ಸಖರೋವ್ ಕಡೆಗೆ ಪಶ್ಚಿಮದ ಕಡೆಯಿಂದ ಸುಳುವುಗಳು ಬರತೊಡಗಿದವು. ಆಗಲೆ ಅವರು ಪಾಶ್ಚಾತ್ಯ ರಾಜ್ಯ ತಾಂತ್ರಿಕರನ್ನು, ವಿಶೇಷವಾಗಿ ಅಮೆರಿಕದವರನ್ನು, ಪತ್ರಕರ್ತರನ್ನು ಭೇಟಿ ಮಾಡುತ್ತ ಸಭೆಗಳನ್ನು ನಡೆಸಲಾರಂಭಿಸಿದ್ದರು. ಕೆಲವು ಪತ್ರಕರ್ತರು, ಸಖರೋವ್‌ನ ಪೂರ್ವವೃತ್ತಿಯಲ್ಲಿ, ಈ ದೇಶದ ರಕ್ಷಣೆಗೆ ನೇರವಾಗಿಯೆ ಸಂಬಂಧಪಟ್ಟಿದ್ದ ವಿಷಯಗಳಲ್ಲಿ ಮುಖ್ಯವಾಗಿ ಆಸಕ್ತಿ ತಾಳಿದ್ದರು.

ಯಾವುದೇ ರಾಜ್ಯವು ಪ್ರಧಾನ ರಹಸ್ಯವೆಂದು ಕಾಪಾಡುವಂಥ ಸಂಗ

(6ನೇ ಪುಟ ನೋಡಿ)

ಭಾರತದ ಪ್ರಜಾಪ್ರಭುತ್ವಕ್ಕೆ ಏನಾಗಿದೆ?

ಯಾವುದೇ ಒಬ್ಬ ವ್ಯಕ್ತಿ ಅನಿವಾರ್ಯವಲ್ಲ ಎಂಬುದು ಪ್ರಜಾಪ್ರಭುತ್ವದ ಮೂಲಭೂತ ತತ್ವವಾಗಿರುತ್ತದೆ. ಆದರೆ ನಿಕೃಷ್ಟ ವೈರಿ ವ್ಯಕ್ತಿ ಆರಾಧನೆ. ಸಾಮೂಹಿಕ ನೇತೃತ್ವವು ಪ್ರಜಾಪ್ರಭುತ್ವದ ಒಂದು ಅಂಗವಾಗಿದೆ.

ವ್ಯಕ್ತಿ ಪೂಜೆಯ ನಂತರ 'ಜಾತಿ'ಯು ದುಡಿಯುವ ಜನತೆಯ ನ್ಯಾಯವಾದ ಪ್ರಜಾಸತ್ತಾತ್ಮಕ ಐಕ್ಯತೆಗೆ ಮಾರಕವಾಗಿರುವ ಭಾರತದ ಇನ್ನೊಂದು ನಿಕೃಷ್ಟ ಅಂಶ.

ತಮ್ಮ ಸಾಮಾಜಿಕ-ಆರ್ಥಿಕ ವಿಮೋಚನೆಯ ಹೋರಾಟಕ್ಕೆ ಜಾತಿ ಸಂಪೂರ್ಣ ಅಸಂಬದ್ಧವಾದ ಅಂಶವೆಂಬುದನ್ನು ದುಡಿಯುವ ಜನ ಸಮೂಹಗಳ ಮಧ್ಯೆ ಸತತವಾಗಿ ತಿಳಿಯಪಡಿಸುವುದರ ಮೂಲಕ ಜಾತಿ ರಾಜಕೀಯವನ್ನು ತಟಸ್ಥಗೊಳಿಸಬೇಕಾಗಿದೆ.

ಜಾತಿ, ವಿದ್ವೇಷಗಳನ್ನು, ಮೂಢನಂಬಿಕೆಗಳನ್ನು ದುರುಪಯೋಗಪಡಿಸಿ ದುಡಿಯುವ ಜನ ಸಮೂಹಗಳನ್ನು ಶೋಷಣೆ ಮಾಡಿ ಮೋಸ ಮಾಡುವುದನ್ನು ಬಹಿರಂಗಪಡಿಸಬೇಕು. ಎಲ್ಲಾ ಜಾತಿಗಳ ಬಹುಸಂಖ್ಯಾತ ಮರ್ಧಿತ ಜನತೆಯ ಒಳಿತಿಗೆ ಈ ಜಾತಿ ಮಾರಕವಾಗಿದೆಯೆಂದು ಬಹಿರಂಗಪಡಿಸಬೇಕು. ಭಾರತೀಯ ಸಮಾಜದ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವ ಮತ್ತು ಭಾರತೀಯ ಜನತೆಯ ಮೂಲಭೂತ ಸಂಸ್ಕೃತಿಗನುಗುಣವಾಗುವ ವೈಜ್ಞಾನಿಕ ಸಮಾಜವಾದದ ಆಧಾರದಲ್ಲಿ ರಾಜಕೀಯವನ್ನು ಕಟ್ಟಿ ಬೆಳೆಸುವ ಅಸ್ತ್ರವಾಗಿ ಪರಿಣಮಿಸದಿದ್ದರೆ ಪ್ರಜಾಪ್ರಭುತ್ವವು ಒಂದು ಡಾಂಭಿಕ ಮೋಸವಲ್ಲದೆ ಬೇರಲ್ಲ.

ಜಾರಿಗೆ ತರುವ ಉದ್ದೇಶವುಳ್ಳ ಸಾಮಾಜಿಕ-ಆರ್ಥಿಕ ಕಾರ್ಯಕ್ರಮಕ್ಕೆ ಸಂಬಂಧಿಸಿದ ಸ್ವಚ್ಛವಾದ ಸಿದ್ಧಾಂತ ನಿಷ್ಠೆಯುಳ್ಳ ವ್ಯಕ್ತಿಗಳನ್ನೊಳಗೊಂಡ ರಾಜಕೀಯ ಪಕ್ಷಗಳ ಅಸ್ತಿತ್ವವಿಲ್ಲದೆ ಒಂದು ನಿಜವಾದ ಪ್ರಜಾಪ್ರಭುತ್ವ ವ್ಯವಸ್ಥೆ ಸಾಧ್ಯವಿಲ್ಲ. ಜನತೆಯ ದುಡಿಯುವ ಸಮಾಜದಲ್ಲಿ ಈ ಸೂತ್ರಗಳು ಬೇರುಬಿಟ್ಟಿರಬೇಕು. ಕಾರ್ಯಕ್ರಮ ಮತ್ತು ಧೋರಣೆಗಳ ಆಧಾರವುಳ್ಳ ಪಕ್ಷಗಳಿಗೆ ನಿಷ್ಠೆಯುಳ್ಳವರಾಗಬೇಕೆಂದು ಜನರಿಗೆ ರಾಜಕೀಯವಾಗಿ ಶಿಕ್ಷಣವೀಯಬೇಕು. ಇಂಥಾ ಮಟ್ಟದಲ್ಲಿ ಜನರು ಸುಸಂಸ್ಕೃತರಾಗಿದ್ದು ಮುಂದಾಳುಗಳ ಬಗ್ಗೆ ನಿಗಾ ಇಡಲು ಸಾಧ್ಯವಾಗಬೇಕು. ಆ ಮೂಲಕ ಬಹಿರಂಗಪಡಿಸಿದ ಕಾರ್ಯಕ್ರಮಗಳೂ, ಧೋರಣೆಗಳೂ ಜಾರಿಗೆ ಬರುವಂತಾಗಬೇಕು.

ಎಡಪಕ್ಷಗಳನ್ನು ಬಿಟ್ಟು ಭಾರತದಲ್ಲಿ ಇತರ ಪಕ್ಷಗಳು ಚುನಾವಣಾ ಪಕ್ಷಗಳಾಗಿವೆ. ಅವುಗಳ ಒಂದೇ ಸಿದ್ಧಾಂತ ಅಧಿಕಾರದ ಹಿಂದೆ ಓಡುವುದು. ಚುನಾವಣೆಗಳ ಸಮಯದಲ್ಲಿ ಅವುಗಳು ನಮ್ಮ ಜನ ವಿಭಾಗಗಳಿಗೆ ಎಲ್ಲಾ ತರದ ಭಾವನೆಗಳನ್ನು ಈಯುತ್ತವೆ. ಚುನಾವಣೆಗಳ ನಂತರ ಪಕ್ಷದ ಪುಢಾರಿಗಳು ಅಧಿಕಾರ ನಿಯಂತ್ರಣಗಾರರಾಗುತ್ತಾರೆ. ಅವರ ಚಟುವಟಿಕೆಗಳೆಲ್ಲವೂ ವಿಧಾನಸೌಧಗಳಿಗೆ ಸೀಮಿತವಾಗುತ್ತದೆ.

ನಮ್ಮ ಜನತೆ ಭಯಂಕರ ಬಡತನ, ಅಜ್ಞಾನ ಮತ್ತು ಮೂಢನಂಬಿಕೆಗಳಲ್ಲಿ ಮುಳುಗಿದ್ದಾರೆ. ಅವರು ತಮ್ಮ ಸ್ಥಿತಿಗತಿಗಳನ್ನೇ 'ವಿಧಿ'ಯೆಂದು ಪರಿಗಣಿಸಿಕೊಂಡಿದ್ದಾರೆ. ತಮ್ಮ ಕಷ್ಟಕಾರ್ಪಣ್ಯಗಳಿಗೆ ಸಾಮಾಜಿಕ ದಬ್ಬಾಳಿಕೆ ಮತ್ತು ಆರ್ಥಿಕ ಶೋಷಣೆಯ ಮೇಲೆ ಮಾನವ ನಿರ್ಮಿತ ಸಾಮಾಜಿಕ ಸಂಘಟನೆಯೆಂಬುದನ್ನು ಅವರು ತಿಳಿದಿರುವುದಿಲ್ಲ. ತಮ್ಮ ವಿಮೋಚನೆಯು ಒಬ್ಬ ಅಗೋಚರ ದೈವದಿಂದ ಸಾಧ್ಯವೆಂದು ಅವರು ಕಾಣುತ್ತಾರೆ.

ಅಂತಹ ಪರಿಸ್ಥಿತಿಯಲ್ಲಿ ಶೋಷಕರ ಮತ್ತವರ ದುಷ್ಟಕೂಟದ ಹಣದ ಶಕ್ತಿಯ ಬೆಂಬಲವುಳ್ಳ ಒಬ್ಬ ಡಾಂಭಿಕ ವ್ಯಕ್ತಿ ಅಂತಹ ಜನರ ಒಬ್ಬನೇ ಒಬ್ಬ ಉದ್ಧಾರಕ ವಾಣಿಯಾಗಿ ಅಸಂಘಟಿತ ಮತ್ತು ರಾಜಕೀಯವಾಗಿ ಅಶಿಕ್ಷಿತರಾದ ಜನಜಂಗುಳಿಯ ಸಂಪೂರ್ಣ ನಿಷ್ಠೆ ಪಡೆಯುವಂತಾಗುತ್ತದೆ.

ಅಂತಹ ಒಬ್ಬ ಮುಂದಾಳು ಮುಂದಕ್ಕೆ ಬಂದಾಗ ಅದು ಪ್ರಜಾಪ್ರಭುತ್ವದ ಪ್ರಚಂಡ ಜಯವೆಂದು ಸಾರುವುದು ಕೇವಲ ರಾಜಕೀಯ ದಿವಾಳಿಖೋರತನದ ವಿಚಾರ. ಅಂತಹ ಸನ್ನಿವೇಶವು ಅದು ರಾಜಕೀಯ ಪಕ್ಷಗಳೆಂದು ಕರೆಯುವುದಕ್ಕೆ ಯೋಗ್ಯತೆ ಇಲ್ಲದ ರಾಜಕೀಯ ಪಕ್ಷಗಳ ಶೂನ್ಯತೆಯನ್ನು ಮಾತ್ರ ಸೃಷ್ಟಿಗೊಳಿಸುವವು. ಕೇವಲ ಚುನಾವಣಾ ಪಕ್ಷಗಳಾದ್ದರಿಂದ ಅವು ಕೆಲಸಕ್ಕೆ ಬಾರದವುಗಳಾಗಿರುತ್ತವೆ.

ಕಳೆದ ಮೂರು ದಶಕಗಳಲ್ಲಿ ಈ ರೀತಿ ಪಕ್ಷಗಳ ತಿರುಗುಚಕ್ರ ತಿರುಗುತ್ತಾ ಬಂದಿದೆ. ದೇಶವು ಇಂದು ಕವಲು ದಾರಿಯಲ್ಲಿದೆ. ಅತ್ಯಂತ ಸಂದಿಗ್ಧ ಕಾಲದಲ್ಲಿ, ಅಧಿಕಾರ ಈಗ ಒಂದು ಯಾವುದೇ ನೀತಿಯಿಲ್ಲದ ಕೂಟದ ಕೈಗೆ ಸೇರಿದೆ.

ರಾಜಕೀಯ ಮೋಸ, ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ಮೌಢ್ಯಗಳ ಎಲ್ಲಾ ರೂಪಗಳಿಂದ ವಿಮೋಚನೆ ಸಾಧಿಸಲು ಸಾಧ್ಯವಾಗುವಂತೆ ಸತತವಾಗಿ ಹೋರಾಡತಕ್ಕ ಶಕ್ತಿ ನಮ್ಮ ಹಿರಿಯ ಭಾರತೀಯ ಜನತೆಯಲ್ಲಿ ಇನ್ನೂ ಉಳಿದಿದೆ ಎಂದು ನಾವು ಆಶಿಸೋಣ.

—ಆರ್. ಎನ್. ಭೈರಾರೆಡ್ಡಿ

○

ಆರ್ಥಿಕ ಸಮೀಕ್ಷೆ

[3ನೇ ಪುಟದಿಂದ]

ತಿಯು ಯಶಸ್ವಿಯಾಗುತ್ತಿಲ್ಲ. ಸಣ್ಣ ಹಾಗೂ ಮಧ್ಯಮ ಮಟ್ಟದ ಬೆಳೆಗಾರರು ಅತೀವ ಕಷ್ಟನಷ್ಟಗಳಿಗೆ ಒಳಗಾಗುತ್ತಿದ್ದಾರೆ. ಮಾರುಕಟ್ಟೆಗಳಿಗೆ ಸಂಬಂಧಿಸಿದ ಅನೇಕ ರಾಜ್ಯ ಶಾಸನಗಳೂ ಬರೆದ ಕಾಗದದಲ್ಲಿಯೇ ಉಳಿದಿವೆ. ರೈತರಿಗೆ ಪಾವತಿಮಾಡಲೆಂದು ಕಂಪೆನಿ ಮಾಲಕರು ವಾಣಿಜ್ಯ ಬ್ಯಾಂಕುಗಳಿಂದ ಸುಲಭ ದರಗಳಲ್ಲಿ ಸಾಲ ಪಡೆಯುತ್ತಾರೆ. ಸರಕಾರಕ್ಕೆ ಒತ್ತಾಯಿಸಿ ಅಬಕಾರಿ ತೆರಿಗೆ ದರಗಳನ್ನು ಕಡಿಮೆಗೊಳಿಸುತ್ತಾರೆ, ಸಿದ್ಧ ವಸ್ತುಗಳ ಬೆಲೆಗಳನ್ನು ಗ್ರಾಹಕರಿಗೆ ಹೆಚ್ಚಿಸುತ್ತಾರೆ, ಕಾರ್ಮಿಕರ ವೇತನ ಮೊತ್ತವು ಹೆಚ್ಚಿದಂತೆ ಮುಷ್ಕರ ಮುರಿಯುತ್ತಾರೆ. ಆದರೆ ಈ ಎಲ್ಲಾ ಮಾಧ್ಯಮಗಳಿಂದ ಸಂಗ್ರಹಿಸಿದ ಸಂಪನ್ಮೂಲಗಳನ್ನು ರೈತರ ಫಸಲಿಗೆ ಪಾವತಿ ಮಾಡುವುದಕ್ಕೆ ಉಪಯೋಗಿಸದೆ, ಸಟ್ಟಾ ವ್ಯಾಪಾರಕ್ಕೆ, ಕಳ್ಳಸಂತೆ ವ್ಯಾಪಾರಕ್ಕೆ, ಅಕ್ರಮ ಸಂಗ್ರಹಕ್ಕೆ ಬಳಸುತ್ತಾರೆ ಮತ್ತು ಅಪಾರ ಲಾಭ ಗಿಟ್ಟಿಸುತ್ತಾರೆ. ರಾಜಕೀಯವನ್ನೇ ತಮ್ಮ ಭದ್ರ ಮುಷ್ಟಿಯಲ್ಲಿಟ್ಟುಕೊಳ್ಳುತ್ತಾರೆ.

ಮಾರ್ಕ್ಸ್ ತಿಳಿಸುವಂತೆ, ಪಾವತಿ ಬಾಕಿ ಮಾಡುವುದರಿಂದ ಬಂಡವಾಳ ಸಂಗ್ರಹಿಸುವುದು ಕೃಷಿ ಉತ್ಪಾದನೆಗಳನ್ನು ಆಧರಿಸಿದ ಕೈಗಾರಿಕೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಕೆಲಸಗಾರರು ಪ್ರತಿದಿನವೂ ಕೆಲಸ ಮಾಡುತ್ತಿದ್ದರೂ, ಅವರಿಗೆ ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಕೂಲಿ ಕೊಡುವುದರಿಂದ ಆ ಅವಧಿಯವರೆಗೆ ಅವರಿಗೆ ಪಾವತಿಯಾಗಬೇಕಾದ ಕೂಲಿ ಹಣವನ್ನು ತಡೆಹಿಡಿದು ಬಂಡವಾಳ ಸಂಗ್ರಹಿಸಲಾಗುತ್ತಿದೆ. ಮೊದಲೇ ತಿಳಿಸಿದಂತೆ, ಕೂಲಿ ಸಂಬಳವನ್ನು ತಿಂಗಳುಗಟ್ಟಲೆ, ವರ್ಷಗಟ್ಟಲೆ ಬಾಕಿ ಮಾಡಿಕೊಂಡೂ ಭಾರತದಲ್ಲಿ ಬಂಡವಾಳಗಾರರು ಬಡ್ಡಿ ಇಲ್ಲದೆ ತಾತ್ಕಾಲಿಕ ಬಂಡವಾಳ ಪಡೆಯುತ್ತಾರೆ.

ಆರ್ಥಿಕ ದುಃಸ್ಥಿತಿಯ ವೇಳೆ, ಗುತ್ತೇದಾರಿ ಬಂಡವಾಳಗಾರರು ಪುಟ್ಟ ಬಂಡವಾಳಗಾರರಿಗೆ ಪಾವತಿಯಾಗಬೇಕಾದ ಹಣವನ್ನು ಬಾಕಿ ಮಾಡಿಕೊಂಡು ಬಂಡವಾಳ ಸಂಗ್ರಹಿಸಿ, ಸಾಲ ನಿಯಂತ್ರಣವನ್ನು ಮೀರಿ ವ್ಯವಹರಿಸುತ್ತಾರೆ. ಪರಿಣಾಮವಾಗಿ ಆರ್ಥಿಕ ದುಃಸ್ಥಿತಿಯ ಭಾರವೆಲ್ಲಾ ಪುಟ್ಟ ಬಂಡವಾಳಗಾರರ ಮೇಲೆ ಮತ್ತು ಚಿಕ್ಕ ಉತ್ಪಾದಕರ ಮೇಲೆ, ರೈತರ ಮೇಲೆ, ಕಾರ್ಮಿಕರ ಮೇಲೆ ಯಶಸ್ವಿಯಾಗಿ ಗುತ್ತೇದಾರಿ ಬಂಡವಾಳಗಾರರು ಹೇರುತ್ತಾರೆ. ಒಂದು ದೃಷ್ಟಿಯಿಂದ ನೋಡಿದರೆ, ಪಾವತಿ ಬಾಕಿಯಿಂದ ಬಂಡವಾಳ ಸಂಗ್ರಹಿಸುವುದು ಬಂಡವಾಳಶಾಹಿ ಪದ್ಧತಿಯ ಅವಿಭಾಜ್ಯ ಅಂಗವಾಗಿದೆ. ಆದುದರಿಂದ, ಬಂಡವಾಳಶಾಹಿಗಳ, ಮುಖ್ಯವಾಗಿ ಗುತ್ತೇದಾರಿ ಬಂಡವಾಳಶಾಹಿಗಳ ವಿರುದ್ಧ ಹೋರಾಡಲು ಮತ್ತು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸಲು ಕಾರ್ಮಿಕರ ಮತ್ತು ರೈತರ ಐಕ್ಯಮತ್ಯ ಅತ್ಯಗತ್ಯವಾಗಿದೆ.

ಸಾಧಾರ: ಪೀಪಲ್ಸ್ ಡೆಮೊಕ್ರಸಿ, 25-11-79 ಮತ್ತು 6-1-80)

●

ಸಖರೋವ್ ಬಗ್ಗೆ ತೆಗೆದುಕೊಂಡ ನಿರ್ಣಯ ನ್ಯಾಯಯುತವಾದದ್ದು

[5ನೇ ಪುಟದಿಂದ]

ತಿಗಳನ್ನು ಸಖರೋವ್ ಆಗಾಗ ಒದರಲಾರಂಭಿಸಿದ್ದರು, ಸಖರೋವ್ ನಿಯಮಿತವಾಗಿ ಭೇಟಿಕೊಡುತ್ತಿದ್ದ ಅಮೆರಿಕದ ರಾಯಭಾರಿ ಕಛೇರಿಯಲ್ಲಿ ಚರ್ಚೆಗಳೇ ನಡೆಯುತ್ತಿದ್ದವು.

ಸೋವಿಯೆತ್ ಜನರತ್ತ, ರಾಜ್ಯದತ್ತ, ನಮ್ಮ ಸಮಾಜವಾದೀ ವ್ಯವಸ್ಥೆಯತ್ತ ಮತ್ತು ನಮ್ಮ ಆಂತರಿಕ ಹಾಗೂ ಬಾಹ್ಯ ಧೋರಣೆಗಳತ್ತ ಕೆಸರೆರಚುವ ಅನೇಕ ಹೇಳಿಕೆಗಳನ್ನು ಸಖರೋವ್ ಕೊಡಲಾರಂಭಿಸಿದರು. ಇದರ ಹಿಂದೆಯೇ ನಂತರ ನಾನಾ ತರಹ ದೂಷಣೆಯ "ದಸ್ತಾವೇಜುಗಳು" "ಹೇಳಿಕೆಗಳು" "ಮನವಿಗಳು" "ಪ್ರತಿಭಟನೆಗಳು" ಎಂದು ಏನೆಲ್ಲ ಬರತೊಡಗಿದುವು. ಸೋವಿಯೆತ್ ಒಕ್ಕೂಟದ ಬಗ್ಗೆ ವೈರಭಾವದಿಂದ ಕೂಡಿದ ಸಖರೋವ್ ಸಾಮಗ್ರಿಯನ್ನು ಪಾಶ್ಚಾತ್ಯ ರೇಡಿಯೋ ಕೇಂದ್ರಗಳು, "ಮನೋ ವೈಜ್ಞಾನಿಕ ಯುದ್ಧವನ್ನು" ನಡೆಸುವುದಕ್ಕೆಂದು ಸೋವಿಯೆತ್ ವಿರೋಧಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾರಂಭಿಸಿದುವು.

ಸಖರೋವ್, ಅತ್ಯಂತ ಆಕ್ರಮಣಕಾರೀ ಸಾಮ್ರಾಜ್ಯಶಾಹಿ ಧೋರಣೆ ಮತ್ತು ವಿಚಾರಧಾರೆಯ ಪ್ರವರ್ತಕರಾದರು. ಸಾಮ್ರಾಜ್ಯಶಾಹಿ ಪ್ರಚಾರದ ಏಜಂಟನಾಗಿ ಸಖರೋವ್ ಪಾತ್ರದ ಕೆಲವು ದೃಷ್ಟಾಂತಗಳು ಇಲ್ಲಿವೆ:

—ತಮ್ಮ ಮೇಲೆ ದಾಳಿಯಿಡುತ್ತಿದ್ದವರ ಮುಂದೆ ಶರಣಾಗುವಂತೆ ಮಾಡಲು ವಿಯೆತ್ನಾಮೀ ಜನರ ವಿರುದ್ಧ ಯುದ್ಧವನ್ನು ಹಿಗ್ಗಿಸಬೇಕೆಂದು ಅಮೆರಿಕದ ಮಿಲಿಟರಿಗೆ ಸಖರೋವ್ ಬಹಿರಂಗವಾಗಿಯೆ ಆಗ್ರಹಪಡಿಸಿದರು. ವಿಯೆತ್ನಾಮ್ ಜನರಿಗೆ ಸೋವಿಯೆತ್ ಒಕ್ಕೂಟದ ಶಸ್ತ್ರಾಸ್ತ್ರಗಳ ಸರಬರಾಜನ್ನು ತತೆಗಟ್ಟುವುದಕ್ಕೆ ಸೋವಿಯೆತ್ ಒಕ್ಕೂಟದ ಮೇಲೆ ಅಮೆರಿಕವು ಭಾರೀ ಒತ್ತಡಗಳನ್ನು ತರಬೇಕೆಂದು ಅತ್ಯಂತ ಆಕ್ರಮಣಕಾರೀ ಅಮೆರಿಕನ್ ವರ್ತುಲಗಳಿಗೆ ಆಗ್ರಹಪಡಿಸತೊಡಗಿದರು.

—ಸಮಾಜವಾದೀ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸುವಂತೆ ಆತ ಬಂಡವಾಳವಾದೀ ದೇಶಗಳ ಆಕ್ರಮಣಕಾರೀ ವರ್ತುಲಗಳನ್ನು ಚುಚ್ಚುತ್ತಲೆ ಇದ್ದರು. ಸೋವಿಯೆತ್ ಒಕ್ಕೂಟದ ವಿರುದ್ಧ ಸೈನಿಕ ಹಣಾಹಣಿಗೆ ನಿಲ್ಲಬೇಕೆಂದು ಕರೆಕೊಡುತ್ತಾರೆ. ನಿರಾಯುಧೀಕರಣದ ಸಮಸ್ಯೆಗಳ ಪರಿಹಾರಕ್ಕೆ ಹಂಬಲಿಸುತ್ತಿರುವ ಶಾಂತಿಪ್ರಿಯ ರಾಜ್ಯಗಳ ಪ್ರಯತ್ನಗಳನ್ನು ಭಂಗಗೊಳಿಸಲು, ಶಾಂತಿ ಮತ್ತು ನಿತ್ಸೇಪದ ವಿರೋಧಿಗಳ ರಾಗದೊಡನೆ ತಮ್ಮ ದನಿಯನ್ನೂ ಸೇರಿಸುತ್ತಾರೆ. ಈ ಉತ್ಸಾಹದಲ್ಲಿ ಆತ ಅಮೆರಿಕದ ಉಗ್ರ "ಗಿಡುಗ"ಗಳನ್ನು ಕೂಡ ಮೀರಿಸುತ್ತಾರೆ. ಅಮೆರಿಕವು ತನ್ನ ಸೈನ್ಯ ಬಲವನ್ನು ಸೋವಿಯೆತ್ ಒಕ್ಕೂಟದ ಸೈನ್ಯ ಬಲಕ್ಕಿಂತ ಎರಡು ಮೂರುಪಟ್ಟು ಹೆಚ್ಚಿಸಿಕೊಳ್ಳಬೇಕೆಂದು ಸಖರೋವ್ ಉಪದೇಶಿಸುತ್ತಾರೆ. ನ್ಯೂಟ್ರಾನ್ ಅಸ್ತ್ರಗಳನ್ನು ತಯಾರಿಸಿ ಪಶ್ಚಿಮ ಯೂರೋಪಿನಲ್ಲಿರಿಸಬೇಕೆಂದು ಪೆಂಟಗಾನನ್ನು ಹುರುದುಂಬಿಸುತ್ತಾರೆ. ಈ ಅಸ್ತ್ರಗಳು ಸಮಾಜವಾದೀ ದೇಶಗಳ ವಿರುದ್ಧ, ಸ್ವತಃ ತಾವು ಹುಟ್ಟಿ, ಬೆಳೆದು, ಬಾಳುತ್ತಿರುವ ಸೋವಿಯೆತ್ ಒಕ್ಕೂಟದ ವಿರುದ್ಧ, ಸೋವಿಯೆತ್ ನಾಗರಿಕರ ವಿರುದ್ಧ ಎಂಬುದೂ ಅವರಿಗೆ ಗೊತ್ತು.

ಸಮಾಜವಾದೀ ಶಿಬಿರದಲ್ಲಿ ಸಖರೋವ್ ಟ್ರೋಜನ್ ಕುದುರೆಯೆಂದು ಸಾಮ್ರಾಜ್ಯಶಾಹಿಗಳು ಬಣ್ಣಿಸುತ್ತಾರೆ. ದ್ರೋಹಿಯನ್ನು ದ್ರೋಹಿಯೆಂದೇ ಕರೆಯಲಾಗುತ್ತದೆ, ಯಾಕೆಂದರೆ ಆತ ತನ್ನನ್ನು ತಾನೆ ವೈರಿಗೆ ಮಾಡಿಕೊಂಡಿರುತ್ತಾನೆ. ಮತ್ತೆ ಬಕ್ಷೀಸೂ ಕಟ್ಟಿಟ್ಟದ್ದು.

ಸಖರೋವ್ ಬರೀ ಶಾಸನಗಳನ್ನು ಮಾತ್ರವೆ ಅತಿಕ್ರಮಿಸಲಿಲ್ಲ, ಆದರೆ ತಾಯಿನಾಡು ಮತ್ತು ನಮ್ಮ ಜನ ಅವನಿಗೆ ನೀಡಿದುದೆಲ್ಲವನ್ನೂ ದುರ[illegible] ಎಲ್ಲ ಬುದ್ಧಿವಾದ, ಎಚ್ಚರಿಕೆಗಳೂ ವ್ಯರ್ಥವಾದುವು.

ತಮ್ಮ ಸೋವಿಯೆತ್-ವಿರೋಧವನ್ನು ಮೊಂಡುತನದಿಂದ ಮುಂದುವರಿಸಿದರು.

ಸಖರೋವ್ ಪದವಿ-ಪ್ರಶಸ್ತಿಗಳನ್ನು ಕಿತ್ತುಹಾಕಿದುದೇ ಅಲ್ಲದೆ, ಅವರನ್ನು ಮಾಸ್ಕೋ ನಗರ ಸೀಮೆಯಿಂದ ಹೊರಹಾಕಬೇಕೆಂದೂ ಅಧಿಕಾರಾಂಗಗಳು ನಿರ್ಣಯಿಸಿವೆ.

ಈ ಕ್ರಮಗಳು ನ್ಯಾಯವಾಗಿವೆ, ಸಖರೋವ್ ನಡೆವಳಿಕೆಗಳಿಗೆ ತಕ್ಕವಾಗಿದೆ. ಇವು ಅಗತ್ಯವಾಗಿದ್ದ ಕ್ರಮಗಳೂ ಹೌದು. ಯಾಕೆಂದರೆ ಸಾಮ್ರಾಜ್ಯಶಾಹಿಯ ಗುಪ್ತಚಾರ ಸೇವೆಯು ಸೋವಿಯೆತ್ ಒಕ್ಕೂಟದ ರಾಜ್ಯ ರಹಸ್ಯಗಳನ್ನು ಹೆಕ್ಕಿಕೊಳ್ಳಲು ಅವರನ್ನು ಉಪಯೋಗಿಸಿಕೊಳ್ಳಲಾರಂಭಿಸಿದ್ದಿತು.

ಪಕ್ಷದ್ರೋಹಿಯನ್ನು, ದೇಶಭ್ರಷ್ಟನ ಬುಡಮೇಲೆ ಚಟುವಟಿಕೆಗಳನ್ನು ಇನ್ನು ಎಷ್ಟು ಮಾತ್ರಕ್ಕೂ ತಡೆದುಕೊಳ್ಳುವುದು ಸಾಧ್ಯವಿರಲಿಲ್ಲ.

—ಕೆ. ಬತ್ಮಾನೋವ್

●

ಮಲತಾಯಿ ಧೋರಣೆ ಕೈಬಿಡಲು ಒತ್ತಾಯ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರವು ತೀವ್ರಗತಿಯಿಂದ ಬೆಳೆಯುತ್ತಲಿದೆ. ಕಾರ್ಮಿಕ ನಗರವಾದ ದಾಂಡೇಲಿಗೆ ಹಲವು ವಿಶಿಷ್ಟ ಸಮಸ್ಯೆಗಳೂ ಇವೆ. ಕಾಳಿ ನದಿ ವಿದ್ಯುತ್ ಯೋಜನೆಯ ಬೃಹತ್ ಕಾರ್ಯಕ್ರಮದಿಂದಲಾಗಿ ದಾಂಡೇಲಿಯ ಜನಸಂಖ್ಯೆಯೂ ತೀವ್ರವಾಗಿ ಬೆಳೆಯುತ್ತಲಿದೆ. ದಾಂಡೇಲಿ ಮುನಿಸಿಪಾಲಿಟಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಡಳಿತವಿದ್ದು, ಕಾರ್ಮಿಕರ ಮತ್ತು ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸಲಾಗುತ್ತಿದೆ. ಆದರೆ ಸರಕಾರದ ಮಲತಾಯಿ ಧೋರಣೆಯಿಂದ ಜನೋಪಯೋಗಿ ಕೆಲಸಗಳನ್ನು ಜಾರಿಗೊಳಿಸುವುದು ಕಷ್ಟವಾಗಿದೆ. ದಾಂಡೇಲಿ ಮುನ್ಸಿಪಾಲಿಟಿಗಿಂತ ಸಣ್ಣದಾಗಿರುವ ಲವೆಡೆಗೆ ಹೆಚ್ಚಿಗೆ ಧನಸಹಾಯ ಕೊಡಲಾಗುತ್ತಿದ್ದರೂ ದಾಂಡೇಲಿಗೆ ಕೇವಲ ಐವತ್ತು ಸಹಸ್ರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಆಕ್ಟ್ರಾಯಿ ತೆರಿಗೆ ರದ್ದಾಗಿರುವುದರಿಂದ ಇಷ್ಟು ಅಲ್ಪ ಪ್ರಮಾಣದ ಸಹಾಯದಿಂದ ಹೆಚ್ಚು ಕೆಲಸ ಕಾರ್ಯಗಳನ್ನು ನಡೆಸಲಾಗುತ್ತಿಲ್ಲ.

ದಾಂಡೇಲಿಯ ಅಸಿಸ್ಟೆಂಟ್ ಎಂಜಿನೀಯರ್ ಅವರ ಸ್ಥಾನವು ಖಾಲಿ ಇದ್ದು, ಯಾವುದೇ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದಲ್ಲಿ ಜಿಲ್ಲಾಧಿಕಾರಿಗಳ ಒಪ್ಪಿಗೆ ಪಡೆಯಬೇಕಾದ ಪರಿಸ್ಥಿತಿ ಬಂದೊದಗಿದೆ. ಇದರಿಂದಲಾಗಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು ನಿಧಾನವಾಗಿದೆ. ಎಷ್ಟೋಬಾರಿ ಕೇಳಿಕೊಂಡರೂ, ಸರಕಾರ ಈ ಬಗ್ಗೆ ಗಮನ ಹರಿಸಿಲ್ಲ; ಅಸಿಸ್ಟೆಂಟ್ ಎಂಜಿನೀಯರ್ ಸ್ಥಾನ ಭರ್ತಿ ಮಾಡಿಲ್ಲ.

ದಾಂಡೇಲಿ ಪುರಸಭೆ ಬಗ್ಗೆ ತಳೆದಿರುವ ಮಲತಾಯಿ ಧೋರಣೆಯನ್ನು ಕೈಬಿಟ್ಟು ರಾಜ್ಯ ಸರಕಾರವು ಹೆಚ್ಚಿನ ಧನಸಹಾಯವನ್ನು ಒದಗಿಸುವಂತೆಯೂ, ಹಾಗೆಯೇ ಅಸಿಸ್ಟೆಂಟ್ ಎಂಜಿನೀಯರ್ ರವರ ಸ್ಥಾನವನ್ನು ಕೂಡಲೇ ಭರ್ತಿ ಮಾಡುವಂತೆಯೂ ದಾಂಡೇಲಿಯಲ್ಲಿ ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸಭೆಯು ರಾಜ್ಯ ಸರಕಾರವನ್ನು ಒತ್ತಾಯಿಸಿದೆ. ○

ಪೇಪರು ಮಿಲ್ಲಿನ ಕಾರ್ಮಿಕರ ಹೋರಾಟಕ್ಕೆ ಸಿ.ಪಿ.ಐ.(ಎಂ) ಬೆಂಬಲ

1979 ನವೆಂಬರ 22ರಿಂದ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಮುಂದಿಟ್ಟು ಉತ್ತರಕನ್ನಡ ಜಿಲ್ಲೆಯ ದಾಂಡೇಲಿ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲಿನ ಕಾರ್ಮಿಕರು ಮುಷ್ಕರ ನಡೆಸುತ್ತಾ ಬಂದಿರುವರು. ಕಂಟ್ರಾಕ್ಟ್ ಕಾರ್ಮಿಕರೂ ಸೇರಿ ಸುಮಾರು ಆರು ಸಾವಿರಕ್ಕಿಂತಲೂ ಹೆಚ್ಚಿಗೆ ಮಂದಿ ದುಡಿಯುವ ಈ ಕಾರ್ಖಾನೆಯ ಎಲ್ಲಾ ಕಾರ್ಮಿಕರು ಒಗ್ಗಟ್ಟಾಗಿ ಹೋರಾಡುತ್ತಲಿರುವರು. ಹಿಂದಿನ ಒಪ್ಪಂದವು 1978ರಲ್ಲೇ ತೀರಿದ್ದು, ಆ ಮೇಲೆ ಸುಮಾರು ಒಂದೂವರೆ ವರ್ಷ ಕಾಲ ಸಂದರೂ ಕಾರ್ಮಿಕರ ಬೇಡಿಕೆಗಳ ಬಗ್ಗೆ ಮಾಲಕರು ಏನೇನೂ ಮಾಡದಿರುವಾಗ ಬೇರೇನೂ ದಾರಿ ಕಾಣದೆ ಕಾರ್ಮಿಕರು ಮುಷ್ಕರದ ಮಾರ್ಗವನ್ನನುಸರಿಸಬೇಕಾಯಿತು. ಹಲವಾರು ಸುತ್ತಿನ ಮಾತುಕತೆಗಳು ನಡೆದು, ಕಾರ್ಮಿಕರ ಕನಿಷ್ಟ ಬೇಡಿಕೆಗಳನ್ನಾದರೂ ಪೂರೈಸುವುದಕ್ಕೆ ಹಿರೆಬಂಡವಾಳಶಾಹಿಗಳ ಕೂಟಕ್ಕೆ ಸೇರಿದ ಮಾಲಕತ್ವವು ಒಪ್ಪದ ಕಾರಣ ಮಾತುಕತೆ ಮುರಿದು ಬಿದ್ದಿದೆ. ಕಾರ್ಮಿಕರು ತಮ್ಮ ಐಕ್ಯ ಹೋರಾಟವನ್ನು ಬಲಪಡಿಸಲು ತೀರ್ಮಾನಿಸಿರುವರು.

ದಾಂಡೇಲಿ ಪೇಪರ್ ಮಿಲ್ಲಿನ ಕಾರ್ಮಿಕರ ಧೀರ ಹೋರಾಟವು ಈಗ ಮೂರನೆಯ ತಿಂಗಳಿಗೆ ಕಾಲಿಟ್ಟಿದೆ. ಈ ಧೀರ ಹೋರಾಟಕ್ಕೆ ಸಂಪೂರ್ಣ ಬೆಂಬಲವೀಯಲು ತಾ. 30-1-80, 31-1-80 ಮತ್ತು 1-2-80ರಂದು ದಾಂಡೇಲಿಯಲ್ಲಿ ಸಭೆಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಸಭೆಯು ತೀರ್ಮಾನಿಸಿದೆ. 2-2-80ರಂದು ದಾಂಡೇಲಿಯಲ್ಲಿ ಸೇರಿದ ಸಿ. ಐ. ಟಿ. ಯು. ರಾಜ್ಯ ಸಮಿತಿಯ ಪದಾಧಿಕಾರಿಗಳ ಸಭೆಯೂ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲವಿತ್ತಿದೆ.

ಗುತ್ತೇದಾರಿ ಬಂಡವಾಳಶಾಹಿ ವಿರುದ್ಧ ದಾಂಡೇಲಿಯ ಕಾರ್ಮಿಕರು ನಡೆಸುವ ಧೀರ ಹೋರಾಟಕ್ಕೆ ರಾಜ್ಯದಾದ್ಯಂತ ಬೆಂಬಲವೀಯಲು ಪಕ್ಷದ ಎಲ್ಲಾ ಘಟಕಗಳಿಗೆ ಸಿ. ಪಿ. ಐ. (ಎಂ) ರಾಜ್ಯ ಸಮಿತಿಯು ಕರೆಯೀಯುತ್ತದೆ.

○

ಲೋಕಸಭಾ ಚುನಾವಣೆ ಕೆಲವು ಸಂಗತಿಗಳು

1. ಕಾಂಗ್ರೆಸ್ (ಐ) 83.53 ಮಿಲಿಯನ್ (ಶೇ.42.58) ಮತಗಳನ್ನು ಪಡೆದು 351 (ಶೇ.66.85) ಸ್ಥಾನಗಳನ್ನು ಪಡೆದಿದೆ.

2) 1952ರಿಂದ ಅಧಿಕಾರದಲ್ಲಿರುವ ಕಾಂಗ್ರೆಸ್‌ಪಕ್ಷ 1952ರಲ್ಲಿ ಶೇ. 45ರಷ್ಟು, 1957ರಲ್ಲಿ 47.8, 1962ರಲ್ಲಿ 44.7, 1967ರಲ್ಲಿ 40.73 ಹಾಗೂ 1971ರಲ್ಲಿ ಶೇ.43.06ರಷ್ಟು ಮತಗಳನ್ನು ಪಡೆದಿದೆ.

3) ಆದರೆ ಕಾಂಗ್ರೆಸ್ (ಐ)ನ 351 ಸದಸ್ಯರಲ್ಲಿ 148 ಸದಸ್ಯರು ಅಲ್ಪ ಮತಗಳಿಂದಆಯ್ಕೆಯಾಗಿದ್ದಾರೆ. ಇದುವರೆಗೆ ಆಗಿರುವ ಎಲ್ಲಾ ಲೋಕಸಭಾ ಚುನಾವಣೆಗಳಲ್ಲೂ ಕಾಂಗ್ರೆಸ್ ಶೇಕಡ ಐವತ್ತಕ್ಕಿಂತ ಕಡಿಮೆ ಮತಗಳನ್ನು ಪಡೆದಿದೆ. ದೇಶದ ಒಟ್ಟು ಮತದಾರರಲ್ಲಿ ನಾಲ್ಕನೇ ಒಂದು ಭಾಗಕ್ಕೂ ಕಡಿಮೆ ಮತದಾರರ ಓಟುಗಳಿಂದ ಅದು ಅಧಿಕಾರದಲ್ಲಿ ಉಳಿದುಕೊಂಡಿದೆ. (1977ರಲ್ಲಿ ಜನತಾಪಕ್ಷದ ಸ್ಥಿತಿಯೂ ಇದೇ ರೀತಿಯದು).

4) ಬಿಹಾರ ರಾಜ್ಯದಲ್ಲಿ ಲೋಕದಳ 36 ಸ್ಥಾನಗಳಿಗೆ ಸ್ಪರ್ಧಿಸಿ ಶೇ. 16.54ರಷ್ಟು ಮತಗಳನ್ನು ಪಡೆಯಿತು. ಜನತಾ ಪಕ್ಷ ಎಲ್ಲಾ 54 ಸ್ಥಾನಗಳಿಗೆ ಸ್ಪರ್ಧಿಸಿ ಶೇ.23.76 ರಷ್ಟು ಮತಗಳನ್ನು ಪಡೆಯಿತು. ಈ ಎರಡೂ ಪಕ್ಷಗಳು ಗಳಿಸಿರುವ ಒಟ್ಟು ಮತಗಳು ಶೇ. 40.30. ಕಾಂಗ್ರೆಸ್ (ಐ) ಇದಕ್ಕೆ ವಿರುದ್ಧವಾಗಿ ಶೇ. 36.40 ಮತಗಳನ್ನು ಗಳಿಸಿದೆ. ಕಾಂಗ್ರೆಸ್(ಐ) ಗೆದ್ದುಕೊಂಡ 30ಸ್ಥಾನಗಳ ಪೈಕಿ, 22 ಸ್ಥಾನಗಳಲ್ಲಿ ಈ ಎರಡೂ ಪಕ್ಷಗಳ ಸಂಯುಕ್ತ ಬಲವು ಕಾಂಗ್ರೆಗಿಂತ ಹೆಚ್ಚಾಗಿದೆ.

5) ಹರಿಯಾನ ರಾಜ್ಯದಲ್ಲಿ ಕಾಂಗ್ರೆ 1977ರಲ್ಲಿ ಅದು ಪಡೆದಿದ್ದ ಶೇ. 22.60 ಮತಗಳಿಗೆ ಪ್ರತಿಯಾಗಿ ಈ ಬಾರಿ ಶೇ.32.60ರಷ್ಟು ಮತಗಳನ್ನು ಪಡೆದಿದೆ, ಇದಕ್ಕೆ ವಿರುದ್ಧ ನಿಂತ ಲೋಕದಳ ಮತ್ತು ಜನತಾಪಕ್ಷಗಳು ಅನುಕ್ರಮವಾಗಿ ಶೇ.33.52 ಹಾಗೂ 28.14ರಷ್ಟು ಮತಗಳನ್ನು ಪಡೆದಿವೆ. ಈ ಎರಡೂ ಪಕ್ಷಗಳಿಗೆ ಸಿಕ್ಕಿರುವ ಒಟ್ಟು ಶೇಕಡ ಮತಗಳು 61.66.

ಲೋಕದಳ 90 ವಿಧಾನಸಭಾ ಕ್ಷೇತ್ರಗಳ ಪೈಕಿ 42ರಲ್ಲಿ ಮೇಲುಗೈ ಪಡೆದು ನಾಲ್ಕು ಸ್ಥಾನಗಳನ್ನು ಗಿಟ್ಟಿಸಿಕೊಂಡಿತು. ಆದರೆ ಕೇವಲ 30 ವಿಧಾನಸಭಾ ಕ್ಷೇತ್ರಗಳಲ್ಲಿ ಮೇಲುಗೈ ಪಡೆದ ಕಾಂಗ್ರೆ ಐದು ಸ್ಥಾನಗಳನ್ನು ದೊರಕಿಸಿಕೊಂಡಿದೆ. ಒಂದು ಸ್ಥಾನ ಪಡೆದ ಜನತಾಪಕ್ಷ 18 ಕ್ಷೇತ್ರಗಳಲ್ಲಿ ಮೇಲುಗೈ ಪಡೆಯಿತು.

6) ಉತ್ತರ ಪ್ರದೇಶ ರಾಜ್ಯದಲ್ಲಿ 1977ರ ಲೋಕಸಭಾ ಚುನಾವಣೆಗಳಲ್ಲಿ ಜನತಾಪಕ್ಷಶೇ.68.06 ಮತಗಳನ್ನು ಪಡೆದು ಎಲ್ಲಾ 85 ಸ್ಥಾನಗಳನ್ನು ಗೆದ್ದುಕೊಂಡಿತು. ಈ ಬಾರಿಯ ಚುನಾವಣೆಗಳಲ್ಲಿ ಲೋಕದಳ ಶೇ. 28.47, ಜನತಾಪಕ್ಷ 22.47ರಷ್ಟು ಮತಗಳನ್ನು ಪಡೆದವು. ಎರಡೂ ಪಕ್ಷಗಳು ಸಂಯುಕ್ತವಾಗಿ 50.94ಶೇ. ಮತಗಳಿಂದ 32ಸ್ಥಾನಗಳಲ್ಲಿ ವಿಜಯಿಯಾಗಿದ್ದಾರೆ. ಕೇವಲ ಶೇ. 35.75 ಮತಗಳನ್ನು ಪಡೆದ ಕಾಂಗ್ರೆಸ್ (ಐ) 51ಸ್ಥಾನಗಳಲ್ಲಿ ಯಶಸ್ಸು ಸಾಧಿಸಿದೆ.

ಚುನಾವಣಾ ಫಲಿತಾಂಶಗಳ ವಿಶ್ಲೇಷಣೆಯಿಂದ ಗೊತ್ತಾಗುವ ಸಂಗತಿಯೆಂದರೆ, ಕೇವಲ ಐದು ಜನ ಕಾಂಗ್ರೆಸ್ (ಐ) ಅಭ್ಯರ್ಥಿಗಳು ಮಾತ್ರ ಒಟ್ಟು ಚಲಾವಣೆಯಾದ ಮತಗಳ ಅರ್ಧದಷ್ಟನ್ನು ಪಡೆದಿದ್ದಾರೆ.

ನಲವತ್ತು ಲೋಕಸಭಾ ಸ್ಥಾನಗಳಲ್ಲಿ ಕಾಂಗ್ರೆಸ್(ಐ) ಅಭ್ಯರ್ಥಿಗಳು ಗಳಿಸಿದ ಮತಗಳು, ಜನತಾ ಮತ್ತು ಲೋಕದಳ ಅಭ್ಯರ್ಥಿಗಳು ಗಳಿಸಿದ ಸಂಯುಕ್ತ ಸಂಖ್ಯೆಯ ಮತಗಳಿಗಿಂತ ಕಡಿಮೆ ಇತ್ತು.

○

ಪಂಜಿನ ಮೆರವಣಿಗೆ

ಬೆಂಗಳೂರು ನಗರದ ತಾಜ್ ಹೋಟೆಲ್ ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ತಾ. 4-2-80ರಂದು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಆಶ್ರಯದಲ್ಲಿ ರಾತ್ರಿ 8 ಘಂಟೆಗೆ ರಸೆಲ್ ಮಾರ್ಕೆಟಿನಿಂದ ಪಂಜಿನ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯ ನಾಯಕತ್ವವನ್ನು ಕಾಂ. ರಾಜನ್ ವಹಿಸಿದ್ದರು. ಮೆರವಣಿಗೆಯು ಶೂಲೆ ಪೋಲೀಸ್ ಸ್ಟೇಷನ್ ಬಳಿ ತಲುಪಿದ ನಂತರ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ. ಅನಂತರಾವ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ತಾಜ್ ಹೋಟೆಲ್ ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು ವಿವರಿಸಿ,ಕಾರ್ಮಿಕರೆಲ್ಲಾ ಐಕ್ಯತೆಯಿಂದ ಹೋರಾಟವನ್ನು ಮುಂದುವರಿಸಿದರೆ ಜಯ ಖಂಡಿತ ಎಂದರು. ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಜಗನ್ನಾಥ್‌ರವರು ಮಾತನಾಡಿ ಮಾಲಕರ ಹಟಮಾರಿತನದ ವರ್ತನೆಯನ್ನು ಖಂಡಿಸಿದರು. ಕಾಂ. ಅಯ್ಯಪ್ಪನವರು ವಂದನಾರ್ಪಣೆ ಮಾಡಿದರು.

●

ನೂತನ ಅಧಿಕಾರ ವರ್ಗ

ತಾ. 20-1-1980ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ ರಾಜ್ಯ ಸರಕಾರಿ ನೌಕರರ ಸಂಘದಲ್ಲಿ ಮಂಗಳೂರಿನಲ್ಲಿ ಸೇರಿದ ಸಹಾಯಕಶುಶ್ರೂಷಣಾದಾದಿಯರ ಮತ್ತು ಸೂಲಗಿತ್ತಿಯರ ಸಂಘದ ಮಹಾಸಭೆಯು ಶ್ರೀಮಾನ್ ಬಿ. ಕೆ. ಶ್ರೀಧರ್, ಫುಡ್ ಇನ್ಸ್‌ಪೆಕ್ಟರ್ ಪ್ರಾಥಮಿಕ ಆರೋಗ್ಯ ಕೇಂದ್ರ ಪೂಂಜಾಲಕಟ್ಟೆ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಶ್ರೀಮಾನ್ ಎಚ್. ಪ್ರಭಾಕರ-ಮೂಲ ಆರೋಗ್ಯ ಕಾರ್ಯಕರ್ತರ ಸಂಘ, ಮಂಗಳೂರು ಶಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಶ್ರೀಮಾನ್ ಪ್ರಾಂಕೋ, ಮೈಕ್ರೋಸ್ಕೋಪಿಸ್ಟ್ ಪ್ರಾ. ಆ. ಕೇಂದ್ರ, ಪೂಂಜಾಲಕಟ್ಟೆ ಇವರು ಉಪಸ್ಥಿತರಿದ್ದರು.

ಕುಮಾರಿ ಸುಮಿತ್ರಾರವರಿಂದ ಪ್ರಾರ್ಥನೆಯಾದ ಬಳಿಕ, ಶ್ರೀಮತಿ ಲಲಿತಾರೈಯವರು ಸ್ವಾಗತ ಭಾಷಣ ಮಾಡಿದರು. 1977-79ರ ವರೆಗಿನ ವರದಿಯನ್ನು ಶ್ರೀಮತಿ ಭಾರತಿಯವರು ಓದಿದರು. ಗತವರ್ಷದ ಲೆಕ್ಕಪತ್ರಗಳ ಮಂಜೂರಾತಿಯಾದ ನಂತರ 1980-81ನೇ ಸಾಲಿನ ಪದಾಧಿಕಾರಿಗಳ ಚುನಾವಣೆ ಮಾಡಲಾಯಿತು. ಶ್ರೀಮತಿ ಸೀತಾರವರು ಮಂಡಿಸಿದ ಬೇಡಿಕೆ ಪಟ್ಟಿಯಲ್ಲಿ ಹತ್ತು ವಿಷಯಗಳನ್ನು ಆರಿಸಿ 10 ಬೇಡಿಕೆಗಳುಳ್ಳ ಬೇಡಿಕೆ ಪಟ್ಟಿಯನ್ನು ತಯಾರಿಸಲಾಯಿತು.

ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ನಿಮ್ಮ ಈ ನ್ಯಾಯಯುತವಾದ ಹೋರಾಟಕ್ಕೆ ನಮ್ಮ ಸಂಘದ ಹಾಗೂ ನನ್ನ ವೈಯಕ್ತಿಕ ಬೆಂಬಲವು ಸದಾ ಇದೆಯೆಂದು ಹೇಳಿದರು. ಅಧ್ಯಕ್ಷರು-ಹೋರಾಟಕ್ಕೆ ಹಲವಾರು ವಿಧದಲ್ಲಿ ಸೂಕ್ತ ಸಲಹೆಗಳನ್ನಿತ್ತರು. ಸಂಘಟನೆಯಿಂದ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರಬದಲು-ಲಂಚಕೊಟ್ಟು ನಮ್ಮ ಕೆಲವೊಂದು ತಾತ್ಕಾಲಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಬಯಸುವ ಪ್ರವೃತ್ತಿ ಖಂಡನೀಯ ಎಂದು ಹೇಳಿದರಲ್ಲದೇ ನಮ್ಮ ನ್ಯಾಯಯುತವಾದ ಹೋರಾಟಕ್ಕೆ ಸದಾ ತನ್ನ ಪ್ರೋತ್ಸಾಹ ಹಾಗೂ ಸಹಕಾರವಿದೆಯೆಂದು ಹೇಳಿದರು.

1980-81ನೇ ಸಾಲಿನ ಪದಾಧಿಕಾರಿಗಳು:-

ಅಧ್ಯಕ್ಷೆ:- ಶ್ರೀಮತಿ ಲಲಿತಾ ರೈ, ಉಪಾಧ್ಯಕ್ಷೆ:- ಶ್ರೀಮತಿ ನಾಗಮ್ಮ, ಪ್ರಧಾನ ಕಾರ್ಯದರ್ಶಿ:- ಶ್ರೀಮತಿ ಎ. ಸೀತಾ, ಉಪಕಾರ್ಯದರ್ಶಿ:- ಶ್ರೀಮತಿ ಇಂದುಮತಿ, ಕೋಶಾಧಿಕಾರಿ:- ಶ್ರೀಮತಿ ಸಾವಿತ್ರಿ, ಸಂಘಟನಾ ಕಾರ್ಯದರ್ಶಿ:- ರತ್ನವಲ್ಲಿ, ಲೆಕ್ಕ ಪರಿಶೋಧಕರು:- ಶ್ರೀಮತಿ ಕಮಲಾ ಬಾಯಿ, ಸಲಹಾ ಸಮಿತಿ:-ಕುಮಾರಿ ಚಂದ್ರಮ್ಮ ಹಾಗೂ ಹತ್ತು ಜನ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆರಿಸಲಾಯಿತು.

○

ನಿವೃತ್ತಿ ವೇತನ ಕೊಡಲು ಆದೇಶ

ಕೊಡಗು ಜಿಲ್ಲೆ, ಹೆಬ್ಬಾಲೆ ಮುನ್ಸಿಪಾಲಿಟಿಯಲ್ಲಿ ಬಿಲ್ ಕಲೆಕ್ಟರ್ ಆಗಿದ್ದು 7 ವರ್ಷಗಳ ಹಿಂದೆ ಕೆಲಸದಿಂದ ವಜಾ ಮಾಡಲ್ಪಟ್ಟ ಶ್ರೀ ಸೋಮಶೇಖರ್‌ನವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿ ಮೈಸೂರ್ ಲೇಬರ್ ಕೋರ್ಟ್ ಹುಕುಂ ನೀಡಿದೆ. ಕೆಲಸಗಾರನನ್ನು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ವಿರಾಜಪೇಟೆ ಪ್ರತಿನಿಧೀಕರಿಸಿತ್ತು.

2. ತಾ. 26-12-79 ಸರ್ಕ್ಯೂಲರ್ ನಂಬರ್ ಹೆಚ್.ಯು.ಡಿ. 664 ಎಂ.ಎಲ್.ಆರ್. 79 ಪ್ರಕಾರ ಕರ್ನಾಟಕ ರಾಜ್ಯ ಸರಕಾರವು ಮುನ್ಸಿಪಾಲಿಟಿಗಳಲ್ಲಿ ನಿವೃತ್ತರಾದ ಪೌರ ಕಾರ್ಮಿಕರು, ಗ್ಯಾಂಗ್‌ಮನ್‌ಗಳಿಗೆ ನಿವೃತ್ತಿ ವೇತನವನ್ನು ಕೊಡಬೇಕಾಗಿ ಆದೇಶ ನೀಡಿದೆ. ಈ ಕುರಿತು ಕೊಡಗು ಜಿಲ್ಲಾ ಡೆಪ್ಯುಟಿ ಕಮೀಷನರ್‌ರವರಿಗೆ ಕೊಡಗು ಜಿಲ್ಲಾ ಲೋಕಲ್ ಬಾಡೀಸ್ ಎಂಪ್ಲಾಯೀಸ್ ಯೂನಿಯನ್, ವಿರಾಜಪೇಟೆ ಮನವಿ ಮಾಡಿದೆ. ಮಡಿಕೇರಿ, ವಿರಾಜಪೇಟೆಗಳಲ್ಲಿ ನಿವೃತ್ತರಾಗಿದ್ದ ಪೌರ ಕಾರ್ಮಿಕರುಗಳಿಗೆ ನಿವೃತ್ತಿ ವೇತನ ಸಿಗುತ್ತಿದ್ದಿಲ್ಲ. ಇನ್ನಾದರೂ ಕೂಡಲೇ ಕೊಡುವಂತೆ ಜಿಲ್ಲಾಧಿಕಾರಿಯವರು ಸೂಕ್ತ ಕ್ರಮ ಕೈಗೊಳ್ಳುವಂತೆ ಯೂನಿಯನ್ ಒತ್ತಾಯಿಸಿದೆ.

○

ಬೆಂಗಳೂರಿನಲ್ಲಿ "ಕೇರಳ ವಿಜಯೋತ್ಸವ"

ಇತ್ತೀಚೆಗೆ ನಡೆದ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಅತ್ಯಧಿಕ ಮತಗಳಿಂದ ಜಯ ಹೊಂದಿರುವುದು ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್‌ಗೆ ಸವಾಲನ್ನು ಹಾಕಿರುವುದನ್ನು ತೋರಿಸುತ್ತದೆ. ಮುಂಬರುವ ದಿನಗಳಲ್ಲಿ ಸರಿಯಾದ ರಾಜಕೀಯ ಧೋರಣೆಯನ್ನೊಳಗೊಂಡು ಹೋರಾಡಬಹುದಾದ ಏಕೈಕ ರಾಜಕೀಯಶಕ್ತಿ ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಮಾತ್ರ ಎಂಬುದನ್ನು ಈ ಜಯವು ತೋರಿಸಿಕೊಟ್ಟಿದೆ.

ಕರ್ನಾಟಕದಲ್ಲೂ ಕೂಡ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸಲು ಪ್ರಯತ್ನಪಡಬೇಕಾಗಿದೆ. ಆದ್ದರಿಂದ ಕೇರಳ ವಿಜಯೋತ್ಸವವನ್ನು ದಿ. 17-2-1980 ರಂದು ಬೆಂಗಳೂರಿನಲ್ಲಿ ಆಚರಿಸಲು "ಕರ್ನಾಟಕ ಪ್ರಗತಿಪರ ಜನರಂಗ" ಸಮಿತಿಯನ್ನು ಸಿ. ಪಿ. ಐ., ಸಿ.ಪಿ.ಐ. (ಎಂ) ಮತ್ತು ಇತರೆ ಪ್ರಜಾಸತ್ತಾತ್ಮಕ ಶಕ್ತಿಗಳನ್ನೊಳಗೊಂಡಂತೆ ಇತ್ತೀಚೆಗೆ ರಚಿಸಲಾಗಿದ್ದು, ತಾ. 17-2-1980 ರಂದು ಚಿಕ್ಕಲಾಲ್‌ಬಾಗಿನಲ್ಲಿ ಬೃಹತ್ ಬಹಿರಂಗಸಭೆ, ಮೆರವಣಿಗೆಯನ್ನು ನಡೆಸಲು ಎಲ್ಲ ಸಿದ್ಧತೆಗಳನ್ನು ಭರದಿಂದ ಮಾಡಲಾಗುತ್ತಿದೆ. ಈ ಸಭೆಯಲ್ಲಿ ಸಿ. ಪಿ.ಐ., ಸಿ.ಪಿ.ಐ.(ಎಂ) ಹಾಗೂ ಇತರೆ ಪ್ರಜಾಸತ್ತಾತ್ಮಕ ಶಕ್ತಿಯ ಮುಖಂಡರುಗಳು ಭಾಗವಹಿಸಲಿದ್ದಾರೆ.

ಸರ್ವಾಧಿಕಾರಿ ಕೋಮುವಾದಿ ವಿರೋಧಿ ಶಕ್ತಿಗಳೆಲ್ಲಾ ಈ ವಿಜಯೋತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ "ಕರ್ನಾಟಕ ಪ್ರಗತಿಪರ ಜನರಂಗ" ಕರೆ ನೀಡಿದೆ.

ಆಶುಭಾಷಣ ಸ್ಪರ್ಧೆ

ಜನವರಿ 28ರಂದು ತುಮಕೂರು ಜಿಲ್ಲಾ ತಿಪಟೂರಿನ ಶ್ರೀ ವಿದ್ಯಾಪೀಠ ಪ್ರೌಢಶಾಲೆಯಲ್ಲಿ ಅಖಿಲ ಕರ್ನಾಟಕ ಅಣಕು ಕಲಾವಿದರ ಸಂಘದ ಕಾರ್ಯದರ್ಶಿಗಳಾದ ಶ್ರೀ ವಿಶ್ವರೂಪಾಚಾರ್‌ರವರ ಅಧ್ಯಕ್ಷತೆಯಲ್ಲಿ ಆಶುಭಾಷಣ ಸ್ಪರ್ಧೆ ನಡೆಯಿತು. ಮಾನಸ ಗಂಗೋತ್ರಿಯ ಡಾ॥ ಗುರುಬಸವೇಗೌಡರು ಮತ್ತು ಸದರಿಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ರಾಜಶೇಖರ್‌ರವರು ಅತಿಥಿಗಳಾಗಿ ಆಗಮಿಸಿದ್ದರು. ಕೆ.ಎಸ್. ಬಸವರಾಜ ಪ್ರಾರಂಭದಲ್ಲಿ ಸ್ವಾಗತಿಸಿದರು. ಆರು ಪ್ರೌಢಶಾಲೆಯವರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಹಳಿಯಾಳ ರೈತರ ಹೋರಾಟ ನಿಧಿಗೆ ಕಾರ್ಮಿಕರ ಸಹಾಯ

ಕರ್ನಾಟಕದ ರೈತ ಚಳುವಳಿಯ ಹೊಸ ಅಧ್ಯಾಯವನ್ನು ಪ್ರಾರಂಭಿಸಿರುವ, ಉ.ಕ. ಜಿಲ್ಲೆ, ಹಳಿಯಾಳ ರೈತರ ಹೋರಾಟ ನಿಧಿಗೆ, ಬೆಳಗಾಂ ಇಂಡಾಲ್ ಅಲ್ಯುಮಿನಿಯಮ್ ಕಾರ್ಖಾನೆಯ ಕಾರ್ಮಿಕರು ರೂ .500-00 ಧನಸಹಾಯ ನೀಡಿದ್ದಾರೆ. ಹಣವನ್ನು ಸಂಘದ ಕಾರ್ಯದರ್ಶಿ ಕಾಂ. ಎಸ್. ಎಮ್. ಯಾಹ್ಯಾರವರು, ಹಳಿಯಾಳ ರೈತಸಂಘದ ಕಾರ್ಯದರ್ಶಿ ಕಾಂ. ಉಡಚಪ್ಪಾ ಬೊಬಾಟಿಯವರಿಗೆ ನೀಡಿದರು.

ಇದು ಇಡೀ ರಾಜ್ಯಕ್ಕೆ ಮಾದರಿಯಾಗಲೆಂದು ಕಾಂ.ಸ್ಥಳೀಕರ್ ಹಾರೈಸಿದರು.

ಸಂಘಟನೆಯನ್ನು ಬಲಪಡಿಸಲು ಕರೆ

[ಒಂದನೇ ಪುಟದಿಂದ]

ಚುನಾವಣೆಯಲ್ಲಿ ಮಂಗಳೂರು ಕ್ಷೇತ್ರದಿಂದ ಸ್ಪರ್ಧಿಸುವ ತೀರ್ಮಾನವನ್ನು ಸಾಕಷ್ಟು ಮೊದಲೇ ಮಾಡಿದ್ದರಿಂದ ತಯಾರಿ ಕೆಲಸ ಮಾಡುವುದಕ್ಕೆ ತೊಂದರೆಯಾಗಿತ್ತು. ಮಂಗಳೂರು ಕ್ಷೇತ್ರದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸ್ಪರ್ಧಿಸುತ್ತಿರುವುದು ಗೆಲ್ಲುವುದಕ್ಕಾಗಿ ಅಲ್ಲ, ಬದಲು ಸೈದ್ಧಾಂತಿಕವಾಗಿ ಮತ್ತು ಗೆಳೆತನದ ಹೋರಾಟವಾಗಿ ಎಂಬ ಪ್ರಚಾರವು ಪತ್ರಿಕೆಗಳೆಲ್ಲೂ ವಿರೋಧ ಪಕ್ಷಗಳ ಮೂಲಕವೂ ಜೋರಾಗಿ ನಡೆದುದರ ಪರಿಣಾಮವಾಗಿ ನಮಗೆ ಮತವೀಯಬಹುದಾಗಿದ್ದ ಒಂದು ವಿಭಾಗದ ಜನರು ಪಕ್ಷದ ಅಭ್ಯರ್ಥಿಗೆ ಮತ ನೀಡಲಿಲ್ಲ. ಪಕ್ಷದ ಸಂಘಟನೆಯಲ್ಲಿ ಕಳೆದ ಆರೇಳು ವರ್ಷಗಳಿಂದ ಬೆಳೆದು ಬಂದ ನಿಶ್ಶಕ್ತಿ ಮತ್ತು ಜನತೆಯನ್ನು ಸಂಘಟಿಸಿ ಹೋರಾಟಕ್ಕೆ ನೇತೃತ್ವವನ್ನು ಕೊಡುವುದರಲ್ಲಿ ಹಿಂದೆ ಬಿದ್ದುದರ ಪರಿಣಾಮವಾಗಿ ಜನತೆಯಿಂದ ನಾವು ಪ್ರತ್ಯೇಕಿಸಲ್ಪಟ್ಟಿರುವೆವು. ಆರ್ಥಿಕ ಬೇಡಿಕೆಗಳ ಬಗ್ಗೆ ನಾವೆಷ್ಟೇ ಶ್ರಮಿಸಿದರೂ, ರಾಜಕೀಯ ಜಾಗೃತಿ ಬೆಳೆಸುವುದರಲ್ಲಿ ಹಿಂದೆ ಬಿದ್ದಿರುವೆವು. ಮಂಗಳೂರು ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯು ಗೆಲ್ಲುವ ಸಾಧ್ಯತೆಯೇ ಇರದಿದ್ದರೂ, ನಾವು ಮತ್ತು ನಮ್ಮ ವಿರೋಧಿಗಳು ಅಂದಾಜು ಮಾಡಿದಂತೆ ಸುಮಾರು ನಲ್ವತ್ತು ಸಹಸ್ರ ಮತ ನಮಗೆ ದೊರೆಯಬೇಕಿತ್ತು. ಆದರೆ ಮೇಲೆ ಹೇಳಿದ ಕೆಲವು ಕಾರಣಗಳಿಂದಲಾಗಿ ನಮಗೆ ಬೀಳಬಹುದಾಗಿದ್ದ ಮತ ಕಡಿಮೆಯಾಗಿರಬಹುದೆಂದು ರಾಜ್ಯ ಸಮಿತಿಯು ಅಭಿಪ್ರಾಯಪಟ್ಟಿತು. ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಯ ಪ್ರಭಾವ, ಸ್ಥಳೀಯ ಮತ್ತು ಜಾತಿ ಮೊದಲಾದವುಗಳನ್ನು ಮತದಾರರು ಅಷ್ಟಾಗಿ ಗಣನೆಗೆ ತೆಗೆದುಕೊಂಡಿಲ್ಲ ಎಂಬುದೂ ಸ್ಪಷ್ಟವಾಗಿದೆ.

ಚುನಾವಣಾ ಕೆಲಸದ ಸಂದರ್ಭದಲ್ಲಿನ ಅನುಭವ, ಹೊಸ ಸಂಪರ್ಕಗಳನ್ನು ಉಪಯೋಗಿಸಿ ನಮ್ಮಲ್ಲಿರುವ ನಿಶ್ಶಕ್ತಿಯನ್ನು ಹೋಗಲಾಡಿಸಿ ಪಕ್ಷದ ಸಂಘಟನೆಯನ್ನು ಬಲಪಡಿಸಲೂ, ಪಕ್ಷದ ಪ್ರಭಾವವನ್ನು ಹೆಚ್ಚಿಸಲೂ ರಾಜ್ಯ ಸಮಿತಿಯು ತೀರ್ಮಾನಗಳನ್ನು ತೆಗೆದುಕೊಂಡಿತು.

ರಾಜ್ಯ ಮಟ್ಟದ ಪ್ಲೀನಮ್:

ಪಕ್ಷದ ಸಂಘಟನೆಯನ್ನು ಬಲಪಡಿಸಲು ಸಾಲ್ಕಿಯಾದ ರಾಷ್ಟ್ರೀಯ ಮಟ್ಟದ ಪ್ಲೀನಮ್ ನಡೆದು ಹಲವಾರು ಸಂಘಟನಾ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿತ್ತು. ರಾಜ್ಯದ ಸಂಘಟನೆಯ ಸ್ಥಿತಿಗತಿಗಳನ್ನು ವಿವರವಾಗಿ ಚರ್ಚಿಸಿ, ಸಾಲ್ಕಿಯಾ ಪ್ಲೀನಮ್ ನಿರ್ಣಯಗಳನ್ನು ಜಾರಿಗೊಳಿಸುವುದಕ್ಕೂ ಮತ್ತು ರಾಜ್ಯದಲ್ಲಿ ಪಕ್ಷದ ಸಂಘಟನೆಯನ್ನು ಉತ್ತಮಗೊಳಿಸುವುದಕ್ಕೂ ರಾಜ್ಯಮಟ್ಟದ ಪ್ಲೀನಮ್ ಕರೆಯಬೇಕೆಂದು ಅಭಿಪ್ರಾಯ ಮಾಡಲಾಗಿತ್ತು. ಲೋಕಸಭಾ ಚುನಾವಣೆಯಿಂದಲಾಗಿ ಈ ವಿಚಾರವನ್ನು ಮುಂದೂಡಬೇಕಾಗಿ ಬಂತು. ದಾಂಡೇಲಿಯಲ್ಲಿ ಸೇರಿದ ರಾಜ್ಯ ಸಮಿತಿ ಸಭೆಯಲ್ಲಿ ಈ ಬಗ್ಗೆ ವಿಚಾರ ವಿಮರ್ಶೆ ನಡೆದು ಮೇ ತಿಂಗಳಲ್ಲಿ ರಾಜ್ಯ ಮಟ್ಟದ ಪ್ಲೀನಮ್ ನಡೆಸಬೇಕೆಂದೂ, ಕೇಂದ್ರ ಸಮಿತಿಯ ಸಲಹೆ ಪಡೆದು ಈ ಬಗ್ಗೆ ಯೋಜನೆ ಹಾಕಬೇಕೆಂದೂ ತೀರ್ಮಾನಿಸಲಾಯ್ತು.

ನಮ್ಮ ನ್ಯೂನತೆಗಳನ್ನು ಅರಿತು, ರಾಜ್ಯ ಸಮಿತಿ ಸದಸ್ಯರಿಂದ ಮೊದಲ್ಗೊಂಡು ಸಾಮಾನ್ಯ ಸದಸ್ಯರ ತನಕ ಹೊಸ ಶೈಲಿಯಲ್ಲಿ ಕೆಲಸಮಾಡಿ, ಜನತೆಯ ಎಲ್ಲಾ ವಿಭಾಗಗಳನ್ನೂ ಸಂಘಟಿಸಿ, ಜನತೆಯ ಸಮಸ್ಯೆಗಳ ಬಗ್ಗೆ ಹೋರಾಡುತ್ತಾ ಜನ ಸಂಪರ್ಕವನ್ನು ಬೆಳೆಸಿ ಸಂಘಟನೆಯನ್ನು ಬಲಪಡಿಸಲೂ, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಲೂ ಮುಂದಾಗಲು ಪಕ್ಷದ ಎಲ್ಲಾ ಸದಸ್ಯರುಗಳಿಗೆ ರಾಜ್ಯ ಸಮಿತಿಯು ಕರೆಯೀಯುತ್ತದೆ.

●

ಸಂಪಾದಕೀಯ

[ಒಂದನೇ ಪುಟದಿಂದ]

ಶ್ರಮಜೀವಿಗಳ ಕಡೆ ನಿಲ್ಲಬೇಕು. ಕಾನೂನುಗಳನ್ನು ಜಾರಿಗೊಳಿಸುವಲ್ಲಿ ಶ್ರೀಮಂತನಿಗೊಂದು ರೀತಿ, ಗರೀಬನಿಗೊಂದು ರೀತಿ ಎಂಬುದಿರಬಾರದು. ಈ ರೀತಿ ಸ್ಪಷ್ಟ ಮತ್ತು ನಿರ್ದಿಷ್ಟ ಕ್ರಮವಹಿಸುವುದಕ್ಕೆ ಬದಲಾಗಿ ರಾಯರು ಹೇಳಿದ ಮಾತುಗಳು, ಹಾಗೆಯೇ ಸ್ಥಾನಬದ್ಧತಾ ಕಾಯ್ದೆಯನ್ನು ಬೇಕಾದಂತೆ ಉಪಯೋಗಿಸಿಕೊಳ್ಳುವ ಸಲಹೆಗಳು ಇವನ್ನೆಲ್ಲಾ ನೋಡಿದರೆ ಮುಂಬರುವ ದಿನಗಳಲ್ಲಿ ಅಧಿಕಾರಿವರ್ಗ ಮತ್ತು ಪೋಲೀಸರ ಕಾರುಬಾರೇ ನಡೆಯುವಂತೆ ಕಾಣುತ್ತದೆ. ಈ ಬಗ್ಗೆ ಈಗಲೇ ಎಚ್ಚತ್ತು ಜನಜಾಗೃತಿಗೊಳಿಸುವುದು ಅಗತ್ಯ. ವಿಚಾರವಂತ ಮತ್ತು ಪ್ರಗತಿಶೀಲ ಬುದ್ಧಿಜೀವಿಗಳೂ, ಪ್ರಜಾಪ್ರಭುತ್ವ ಮೌಲ್ಯಗಳನ್ನು ನಂಬುವವರೂ ಈ ದಿಕ್ಕಿನತ್ತ ಕಾರ್ಯೋನ್ಮುಖರಾಗಬೇಕಾಗಿದೆ.

ಪೌರ ಕಾರ್ಮಿಕರ ಬೇಡಿಕೆ ಈಡೇರಿಕೆ

ಕೊಡಗು ಜಿಲ್ಲಾ, ಮಡಿಕೇರಿ ಮುನ್ಸಿಪಾಲಿಟಿ ನೌಕರರಿಗೆ ಮುಫತ್ತಾಗಿ ಪ್ರತಿವರ್ಷ 2 ಜೊತೆ ಯೂನಿಫಾರಂಗಳನ್ನು ಕೊಡಬೇಕಾಗಿ ಮೈಸೂರು ಲೇಬರ್ ಕೋರ್ಟ್ ಎವಾರ್ಡ್ ನೀಡಿದೆ. ಮುನ್ಸಿಪಾಲಿಟಿಗಳಲ್ಲಿ ಈ ಹಿಂದೆ ವರ್ಷಕ್ಕೆ 2 ಜೊತೆ ಯೂನಿಫಾರಂಗಳನ್ನು ಕೊಡುತ್ತಿದ್ದರು. ವರ್ಷಕ್ಕೆ 2 ಜೊತೆ ಕೊಡುವುದನ್ನು ನಿಲ್ಲಿಸಿ 2 ವರ್ಷಕ್ಕೆ 3 ಜೊತೆ ಕೊಟ್ಟುದರ ವಿರುದ್ಧ ವಿವಾದವನ್ನು ಎತ್ತಲಾಗಿತ್ತು. ವಿರಾಜಪೇಟೆ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ನೌಕರರನ್ನು ಪ್ರತಿನಿಧೀಕರಿಸಿತ್ತು.

○

ಕೋಲಾರ ತಾಲ್ಲೂಕು ರೈತ ಸಂಘದ ಸಭೆ

ತಾಲ್ಲೂಕು ರೈತಸಂಘದ ಸಭೆ ತಾ. 4-2-80ರಂದು ಶ್ರೀ ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ತಾಲ್ಲೂಕಿನಾದ್ಯಂತ ಹೋಬಳಿವಾರು ಸಭೆಗಳನ್ನು ನಡೆಸಲು ಸಮಿತಿ ನಿರ್ಧರಿಸಿತು. ತಾಲ್ಲೂಕಿನಲ್ಲಿ, ಸೊಲೂರು, ನಾಗಲಾಪುರ, ಗಡಿಪಲ್ಲಿ, ಕಸರನೆಟ್ಟಿನ ಹಳ್ಳಿಯಲ್ಲಿ ರೈತರು ಸಾಗುವಳಿ ಮಾಡುತ್ತಿರುವ ಜಮೀನುಗಳಲ್ಲಿ ಅರಣ್ಯ ಇಲಾಖೆಯವರು ಟ್ರೆಂಚುಗಳನ್ನು ಹೊಡೆಯುವುದನ್ನು ಸಮಿತಿ ಖಂಡಿಸಿತು.

ನೀರಿನ ಕಂದಾಯ, ಸಾಲದ ವಸೂಲಿಯಲ್ಲಿ ಸರ್ಕಾರಿ ಅಧಿಕಾರಿಗಳು ಮಾಡುತ್ತಿರುವ ದೌರ್ಜನ್ಯವನ್ನು ಖಂಡಿಸಲಾಯಿತು. ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳಿಗೆ ಮತ ನೀಡಿದ್ದಕ್ಕಾಗಿ ಕೇರಳ, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಜನತೆಯನ್ನು ಅಭಿನಂದಿಸಲಾಯಿತು.

ಟಿ. ಕೆ. ಗಂಗಿರೆಡ್ಡಿಯವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ಹೋಬಳಿವಾರು ರೈತಸಂಘದ ಸಭೆಗಳ ತಾರೀಖುಗಳನ್ನು ನಿಗದಿಪಡಿಸಿದ ನಂತರ ಸಭೆ ಮುಗಿಯಿತು.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಬರಲಿದೆ ವಿಶ್ವಕಥಾಕೋಶ: ಜಗತ್ತಿನ ಶ್ರೇಷ್ಠ ಕಥಾ ಸಂಗ್ರಹ

ಕರ್ನಾಟಕದಲ್ಲಿ ಪುರೋಗಾಮಿ ವಿಚಾರಧಾರೆಯ ಪುಸ್ತಕ ಪ್ರಕಟಣೆ ಹಾಗೂ ವಿತರಣೆಯಲ್ಲಿ ತನ್ನದೇ ವೈಶಿಷ್ಟ್ಯ ಹೊಂದಿರುವ ನವಕರ್ನಾಟಕ ಪ್ರಕಾಶನ ತನ್ನ ಇಪ್ಪತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ನೂರು ದೇಶಗಳ ನಾಲ್ಕುನೂರು ಅತ್ಯುತ್ತಮ ಸಣ್ಣ ಕಥೆಗಳನ್ನು ಇಪ್ಪತ್ತೈದು ಸಂಪುಟಗಳಲ್ಲಿ ಹೊರತರಲು ನಿರ್ಧರಿಸಿದೆ.

ಮೂರು ವರ್ಷಗಳಲ್ಲಿ ಈ ಯೋಜನೆಯನ್ನು ಕೃತಿಗಿಳಿಸಲು ಖ್ಯಾತ ಸಾಹಿತಿ ನಿರಂಜನರ ಪ್ರಧಾನ ಸಂಪಾದಕತ್ವದಲ್ಲಿ ಸಂಪಾದಕ ಮಂಡಳಿಯೊಂದು ಕಾರ್ಯೋನ್ಮುಖವಾಗಿದೆ. ಐದು ಸಾವಿರ ಪುಟಗಳ ವಿಶ್ವಕಥಾ ಕೋಶದ ಮೊದಲ ನಾಲ್ಕು ಸಂಪುಟಗಳು 1980ರ ಯುಗಾದಿಯಂದು ಹೊರಬರಲಿವೆ. ಉಳಿದ ಸಂಪುಟಗಳು ಹಂತ, ಹಂತವಾಗಿ ಬರುತ್ತವೆ. ಕೊನೆಯ ಕಂತನ್ನು 1982ರ ದೀಪಾವಳಿಯಂದು ಬಿಡುಗಡೆ ಮಾಡಲಾಗುವುದು.

ಲೋಕದಾದ್ಯಂತ ಉತ್ತಮತರ ಬದುಕಿಗಾಗಿ ಮಾನವ ನಡೆಸುತ್ತಾ ಬಂದಿರುವ ಕಥಾ ಚಿತ್ರಣವನ್ನು ಪುಟ, ಪುಟಗಳಲ್ಲಿ ಮೂಡಿಸಲಾಗಿದೆ. ಭಾರತ, ಆಫ್ರಿಕ, ವಿಯೆಟ್ನಾಂ, ಮಂಗೋಲಿಯ, ಇಂಗ್ಲೆಂಡ್, ರುಮಾನಿಯಾ, ರಷ್ಯಾ, ಐರ್ಲೆಂಡ್, ಜೆಕೋಸ್ಲೋವಾಕಿಯ, ಅಲ್ಬೇನಿಯಾ, ಕ್ಯೂಬಾ, ಅರೇಬಿಯಾ, ಲ್ಯಾಟಿನ್ ಅಮೇರಿಕಾ ಇನ್ನೂ ಮುಂತಾದ ದೇಶಗಳ ಜನರ ನಗೆ ನಲಿವು ಓದುಗರನ್ನು ಹರ್ಷಿತರನ್ನಾಗಿ ಮಾಡುವುದು. ಅವರ ಅನ್ನ ಬವಣೆ ನಿಮ್ಮ ಮಾನವೀಯ ಅಂತಃಕರಣ ಮಿಡಿಯುವುದು. ಅವರ ಠೇಕಾರ ಮೈ ನವಿರೇಳಿಸುವುದು, ಹೊಸತೊಂದು ನಾಳೆಯ ಬಗೆಗೆ, ಅದರ ಭವ್ಯತೆಯ ಬಗೆಗೆ ಓದುಗರಲ್ಲಿ ಆತ್ಮವಿಶ್ವಾಸ ಮೂಡಿಸುವುದು.

ಇಪ್ಪತ್ತೈದು ಸಂಪುಟಗಳ ಒಟ್ಟು ಬೆಲೆ ರೂ. 250. ಮುಂಗಡವಾಗಿ ರೂ. 200 ಕೊಟ್ಟರೆ ರೂ. 50 ಉಳಿಯುತ್ತದೆ. ಪುಸ್ತಕಗಳನ್ನು ಪ್ರಕಾಶಕರು ನಿಮ್ಮ ಮನೆ ಬಾಗಿಲಿಗೆ ತಲುಪಿಸುತ್ತಾರೆ.

○

ಎಡ ಪಕ್ಷಗಳ ವಿಜಯಕ್ಕಾಗಿ ಅಭಿನಂದನೆ

ಉ. ಕ. ಜಿಲ್ಲೆ, ಕಾರವಾರ ತಾಲ್ಲೂಕು ಕಿಸಾನ್ ಸಭಾ ಸಮಿತಿ ತಾ. 28-1-80 ರಂದು ಸಭೆ ಸೇರಿ ಪ. ಬಂಗಾಳ, ತ್ರಿಪುರಾ ರಾಜ್ಯಗಳಲ್ಲಿ ಎಡ ಪಕ್ಷಗಳ ಗೆಲುವಿಗೆ ಹಾಗೂ ಕೇರಳದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ವಿಜಯಕ್ಕೆ ಕಾರಣರಾದ ಜನತೆಯನ್ನು ಅಭಿನಂದಿಸಲಾಯಿತು. ಈ ರಾಜ್ಯಗಳ ಹಾದಿಯಲ್ಲಿ ಕರ್ನಾಟಕದಲ್ಲಿಯೂ ದುಡಿಯುವ ಜನತೆಯ ಸಂಘಟನೆಯನ್ನು ಮಾಡಲು ಸಮಿತಿ ನಿರ್ಧರಿಸಿದೆ.

○

ಅತ್ಯಂತ ಜನಪ್ರಿಯ ಪಕ್ಷ ಸಿ. ಪಿ. ಐ. (ಎಂ)

ಏಳನೇ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಂದು ರಾಜಕೀಯ ಪಕ್ಷದ ಅಭ್ಯರ್ಥಿಗಳು ಗಳಿಸಿದ ಸರಾಸರಿ ಮತಗಳ ದೃಷ್ಟಿಯಿಂದ ಸಿ. ಪಿ. ಐ. (ಎಂ) ಉಳಿದ ಎಲ್ಲಾ ರಾಜಕೀಯ ಪಕ್ಷಗಳಿಗಿಂತ ಅತ್ಯಧಿಕ ಮತಗಳನ್ನು ಪಡೆದಿದೆ.

ಸಿ. ಪಿ. ಐ. (ಎಂ)ನ ಪ್ರತಿ ಅಭ್ಯರ್ಥಿಗಳಿಗೆ ತಲಾ 1,91,416 ಮತಗಳು ದೊರಕಿವೆ. ಕಾಂಗ್ರೆಸ್ (ಐ) ಅಭ್ಯರ್ಥಿಗಳಿಗೆ 1,71,161 ಮತಗಳು ಹಾಗೂ ಸಿ. ಪಿ. ಐ. ನ ಅಭ್ಯರ್ಥಿಗಳು ತಲಾ 1,06.712 ಮತಗಳನ್ನು ಗಳಿಸಿದ್ದಾರೆ. ಈ ಅಂಕಿಅಂಶಗಳನ್ನು ಕಂಪ್ಯೂಟರ್‌ನ ಸಹಾಯದಿಂದ ಪಡೆದು "ದಿ ಪೀಪಲ್ಸ್ ವರ್ಡಿಕ್ಟ್" ಎಂಬ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ಪುಸ್ತಕದ ಪ್ರಕಾರ ಜನತಾಪಕ್ಷ, ಲೋಕದಳ ಹಾಗೂ ಕಾಂಗ್ರೆಸ್ (ಯು) ತಮ್ಮ ಭದ್ರಕೋಟೆ ಎಂದುಕೊಂಡ ಕ್ಷೇತ್ರಗಳಲ್ಲಿ ತಮ್ಮ ಎಲ್ಲಾ ಶಕ್ತಿಗಳನ್ನು ವ್ಯಥಾ ವ್ಯಯಿಸಿಕೊಂಡವು.

ಜನತಾ ಪಕ್ಷದ ಅಭ್ಯರ್ಥಿಗಳು ಗಳಿಸಿದ ಸರಾಸರಿ ಮತಗಳ ಸಂಖ್ಯೆ 86,395, ಲೋಕದಳ 63,733 ಮತಗಳನ್ನೂ ಕಾಂಗ್ರೆಸ್ (ಯು) 11,410 ಮತಗಳನ್ನೂ ಗಳಿಸಿವೆ.

1977ರ ಲೋಕಸಭಾ ಚುನಾವಣೆಯಲ್ಲಿ ಜನತಾಪಕ್ಷದ ಅಭ್ಯರ್ಥಿಗಳು ತಲಾ 1,91,455, ಸಿ. ಪಿ. ಐ. (ಎಂ) ದ್ವಿತೀಯ ಸ್ಥಾನ, ಅವಿಭಾಜಿತ ಕಾಂಗ್ರೆಸ್ ತೃತೀಯ ಸ್ಥಾನ ಪಡೆದಿದ್ದವು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT